ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಬಂಗಾರಪೇಟೆ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಪ್ರೊ. ಕೆ.ಆರ್. ಜಯಶ್ರೀ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**BANGARAPETE:** An Introducing Book on the Places in Karnataka that Played a Major Role in the Freedom Struggle; Written by Prof. K.R. Jayasri; Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರೊ. ಕೆ.ಆರ್. ಜಯಶ್ರೀ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

ಸ್ವಾತಂತ್ರ್ಯದ ಅಮೃತಮಹೋತ್ಸವ



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರಂತಹ ಧ್ರುವತಾರೆಯ ಮಾರ್ಗದರ್ಶನದಲ್ಲಿ ದೇಶದಾದ್ಯಂತ ಅನೇಕ ಮಿನುಗು ತಾರೆಗಳು ಭಾಗವಹಿಸಿ ಸ್ವಾತಂತ್ರ್ಯ ಗಳಿಸಿಕೊಳ್ಳುವುದರಲ್ಲಿ ಯಶಸ್ಸು ಕಂಡಿರುವುದು ತಿಳಿದೇ ಇದೆ. ಚಳವಳಿಯಲ್ಲಿದ್ದವರಲ್ಲಿ ಹಲವರು ಸ್ವಾತಂತ್ರ್ಯದ ಬಾವುಟ ಹಾರಿದುದನ್ನು ಕಂಡು ರೋಮಾಂಚಿತರಾದರು, ಇನ್ನು ಅನೇಕರು ಮಧ್ಯದಲ್ಲಿಯೇ ಹುತಾತ್ಮರಾದರು. ಹೋರಾಟಗಾರರ ಉತ್ಸಾಹ, ತ್ಯಾಗ, ಬಲಿದಾನಗಳನ್ನು ಎಷ್ಟು ನೆನಪು ಮಾಡಿಕೊಂಡರೂ ಸಾಲದು. ತಮ್ಮ ಸ್ವಂತ ಜೀವನ, ಕುಟುಂಬ, ಬಂಧು–ಬಳಗ, ಆಸೆ–ಆಕಾಂಕ್ಷೆಗಳನ್ನು ತ್ಯಜಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಹೋರಾಡಿ ವಿಜಯವಂತರಾದರು.

ಭಾರತ ಸ್ವಾತಂತ್ರ್ಯ ಮಂತ್ರವನ್ನು ಜಪಿಸುತ್ತಾ, ಬ್ರಿಟೀಷರ ದಾಸ್ಯದಿಂದ ಭಾರತ ಮಾತೆಯನ್ನು ಮುಕ್ತಗೊಳಿಸಲು ಕೋಲಾರ ಜಿಲ್ಲೆಯ ಅನೇಕ ದೇಶಭಕ್ತರು ಹೋರಾಟ ನಡೆಸಿದರು. ಜಿಲ್ಲೆಯ ಹೋರಾಟದ ಬಗ್ಗೆ ಪ್ರತ್ಯೇಕವಾಗಿ ಅಧ್ಯಯನ ನಡೆಸಿದಾಗ ಹೋರಾಟಗಾರರ ದೊಡ್ಡ ಪಟ್ಟಿಯೇ ಸಿಕ್ಕುತ್ತದೆ. ಆದರೆ ವಿವರಗಳು ಲಭ್ಯವಾಗುವುದಿಲ್ಲ. ಎಲ್ಲೋ ಕೆಲವರು ಜೀವಂತವಾಗಿರುವ ಶತಾಯುಷಿಗಳಿದ್ದಾರೆ. ಅನೇಕರು ದೈವಾಧೀನರಾಗಿದ್ದಾರೆ.

ಇತರ ಜಿಲ್ಲೆಗಳಿಂದ ಕೋಲಾರಕ್ಕೆ ಬಂದು, ಕೋಲಾರ ಜಿಲ್ಲೆಯ ಕಾರ್ಯಕರ್ತರ ಜೊತೆಯಲ್ಲಿ ಹೋರಾಟ ನಡೆಸಿರುವವರು ಅನೇಕರಿದ್ದಾರೆ.

ಈ ಎಲ್ಲ ಘಟನೆಗಳನ್ನು ಓದುಗರಿಗೆ ತಲುಪಿಸಲು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರಣದಿಂದ ಸಾಧ್ಯವಾಯಿತು. ಅದಕ್ಕಾಗಿ ನಾನು ಅಧ್ಯಕ್ಷರಿಗೆ, ಮತ್ತೆಲ್ಲರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಜಿಲ್ಲೆಯ ಎಲ್ಲ ದೇಶಭಕ್ತರನ್ನು ಸ್ಮರಿಸಿಕೊಂಡು ಈ ಕಿರುಹೊತ್ತಿಗೆಯನ್ನು ಅವರ ಪಾದಗಳಿಗೆ ಅರ್ಪಿಸುತ್ತಿದ್ದೇನೆ.

"ಎಂದರೋ ಮಹಾನುಭಾವುಲು ಅಂದರಿಕೀ ವಂದನಮುಲು".

**ಕೆ. ಆರ್. ಜಯಶ್ರೀ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಪೀಠಿಕೆ | ೧೫ |
| ಕೋಲಾರ ಜಿಲ್ಲೆ | ೧೬ |
| ರಾಜಕೀಯ ಇತಿಹಾಸ | ೧೯ |
| ಹೈದರಾಲಿ ಖಾನ್ | ೨೦ |
| ಟಿಪ್ಪು ಸುಲ್ತಾನ್ | ೨೨ |
| ಸಂಸ್ಥಾನದಲ್ಲಿ ರಾಜಕೀಯ ಜಾಗೃತಿ | ೨೩ |
| ಬಂಗಾರಪೇಟೆ | ೨೫ |
| ಜಿಲ್ಲೆಯಲ್ಲಿ ಗಾಂಧೀಜಿ | ೨೬ |
| ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿ | ೨೭ |
| ಪ್ರಜಾಮಿತ್ರ ಮಂಡಳಿ / ಪ್ರಜಾ ಪಕ್ಷ | ೨೮ |
| ಅಸಹಕಾರ ಚಳವಳಿ | ೩೦ |
| ಗಾಂಧೀಜಿ - ನಂದಿ ಗಿರಿಧಾಮ - ಕೋಲಾರದಲ್ಲಿ ಪ್ರವಾಸ | ೩೧ |
| ಬಂಗಾರಪೇಟೆಯಲ್ಲಿ ಬಾಪೂ | ೩೨ |

| | |
|---|---|
| ಆದಿನಾರಾಯಣ ಶೆಟ್ಟಿ | ೩೩ |
| ಶಿವಪುರ ಧ್ವಜಾರೋಹಣ – ವಿದುರಾಶ್ವತ್ಥ ದುರಂತ | ೩೫ |
| ಜಿಲ್ಲೆಯಲ್ಲಿ ಮತ್ತಷ್ಟು ಚಟುವಟಿಕೆಗಳು | ೩೮ |
| ಕೋಲಾರ ಚಿನ್ನದ ಗಣಿ ಸತ್ಯಾಗ್ರಹ | ೪೦ |
| ಸತ್ಯಾಗ್ರಹ ಶಿಬಿರ | ೪೨ |
| ಕ್ವಿಟ್ ಇಂಡಿಯಾ ಚಳುವಳಿ | ೪೪ |
| ಸರ್ವತಂತ್ರ ಸ್ವತಂತ್ರ ಭಾರತ | ೪೭ |
| ಜವಾಬ್ದಾರಿ ಸರ್ಕಾರ–ಮೈಸೂರು ಚಲೋ ಚಳುವಳಿ | ೪೮ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೨ |

## ಪೀಠಿಕೆ

೧೮ನೆಯ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಅನೇಕ ಹೋರಾಟಗಳು ನಡೆದವು. ಭಾರತದ ಉದ್ದಗಲಕ್ಕೂ ಆಂಗ್ಲರ ದಬ್ಬಾಳಿಕೆಯನ್ನು ವಿರೋಧಿಸುತ್ತಾ ಬಂದ ಅನೇಕ ಘಟನೆಗಳು ದಾಖಲಾಗಿವೆ. ಆದರೆ ಮುಖ್ಯ ಸಂದರ್ಭಗಳು ಪ್ರಸ್ತಾಪವಾಗಿವೆಯೇ ಹೊರತು ಸಣ್ಣ ಪುಟ್ಟವಾದರೂ ಮಹತ್ವದ ಹೋರಾಟಗಳನ್ನು ದಾಖಲು ಮಾಡಲು ಪ್ರಯತ್ನಗಳು ನಡೆದಿಲ್ಲವೆನ್ನಬಹುದು. ಸುಮಾರು ೨೫೦ ವರ್ಷಗಳಿಗೂ ಹೆಚ್ಚು ಕಾಲ ನಡೆದ ಹೋರಾಟದ ಸುದೀರ್ಘ ಇತಿಹಾಸ ಇದೆ. ವಿದೇಶೀ ಆಡಳಿತ, ಅವರ ದಬ್ಬಾಳಿಕೆ, ಸ್ಥಳೀಯರನ್ನು ಹತ್ತಿಕ್ಕುತ್ತಾ ದೌರ್ಜನ್ಯ ನಡೆಸುತ್ತಿದ್ದುದರ ವಿರುದ್ಧ ಹಾಗೂ ಅವರ ಶೋಷಣೆಗಳನ್ನು ವಿರೋಧಿಸಿ ತಮ್ಮ ಧ್ವನಿಯನ್ನು ಎತ್ತಿ, ಧೈರ್ಯದಿಂದ ಆಯಾ ಕಾಲದ ರಾಜ ಮಹಾರಾಜರು, ವೀರರಾಣಿಯರು, ಅನೇಕ ಸಾಮಾನ್ಯ ಜನರು, ರೈತರು, ವ್ಯಾಪಾರಸ್ಥರು ಹೀಗೆ ದೇಶದಾದ್ಯಂತ ಹೋರಾಟ ನಡೆಸಿದ್ದಾರೆ.

೧೬೦೦ ರಲ್ಲಿ ಬ್ರಿಟಿಷರು ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪಿಸಿದರು. ೧೭೫೭ ರಲ್ಲಿ ಪ್ಲಾಸಿ ಕದನವಾಯಿತು. ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬ ಹೇಳಿಕೆಗೆ ಪಾತ್ರವಾಗಿರುವ ಸಿಪಾಯಿ ದಂಗೆ ಎಂಬ ಬ್ರಿಟಿಷರ ವಿರುದ್ಧ ಕಿಡಿ ಹೊತ್ತಿಕೊಂಡಿತು.

ಇದಾದ ಹಲವು ವರ್ಷಗಳ ನಂತರ ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಹುಟ್ಟಿತು. ಪ್ರಾಂತೀಯ ಹಾಗೂ ರಾಷ್ಟ್ರೀಯ ನಾಯಕರ ಉಗಮವಾಯಿತು. ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ ಠಾಗೂರರ ಸಾಹಿತ್ಯ, ಭಾವನಾತ್ಮಕ ರಚನೆಗಳ ಮೂಲಕ ಸ್ವಾತಂತ್ರ್ಯದ ತುಡಿತಕ್ಕೆ ಉತ್ತೇಜನ ಸಿಕ್ಕಂತಾಯಿತು.

ಗಾಂಧೀಜಿಯವರ ಸತ್ಯಾಗ್ರಹ, ಅಹಿಂಸೆ, ಸ್ವದೇಶಿ ಮಂತ್ರ ಜನರಿಗೆ ಅರ್ಥವಾಗುತ್ತಾ ಬಂತು. ಹಿಂಸೆಗೆ ಚಿಕ್ಕ ಗುಂಪು ಸಿದ್ಧವಾದರೆ, ಅಹಿಂಸಾ ಚಳವಳಿಯಲ್ಲಿ ಭಾಗವಹಿಸಲು ಜನ ಸಮೂಹವೇ ಸಿದ್ಧವಾಯಿತು. ಸ್ವದೇಶಿ ಮಂತ್ರ ರಾಷ್ಟ್ರೀಯ ಅಸ್ತ್ರವಾಯಿತು. ಗಾಂಧೀಜಿಯವರು ತಮ್ಮದೇ ಆದ ಮಾರ್ಗದಿಂದ ನಮ್ಮ ಭಾರತದ ಕನಸನ್ನು ಕಟ್ಟಿಕೊಂಡು ವರ್ಷಗಟ್ಟಲೆ ದೇಶದ ಉದ್ದಗಲಕ್ಕೂ ಸಂಚರಿಸಿದರು. ಭಾರತದ ರಾಜ್ಯಗಳು, ನಗರ–ಪಟ್ಟಣಗಳು, ಹಳ್ಳಿಗಳನ್ನೆಲ್ಲಾ ಸುತ್ತುತ್ತಾ ದೇಶದ ಜನರ ಕುಂದು ಕೊರತೆಗಳನ್ನು ತಿಳಿದುಕೊಂಡರು. ಸರಳ–ಸಜ್ಜನ ಗಾಂಧೀಜಿ ಜನಸಾಮಾನ್ಯರ ಕಣ್ಣಿಗೆ ಬೀಳುತ್ತಲೇ ಲಕ್ಷಾಂತರ ಶ್ರೀಸಾಮಾನ್ಯರ ಕಣ್ಣಲ್ಲಿ ಮಿಂಚಿನ ಸಂಚಾರವಾಯಿತು!.

ಕೋಲಾರ ಜಿಲ್ಲೆಯಲ್ಲಿ ಆದುದೂ ಇದೇ ರೀತಿಯ ಮಿಂಚಿನ ಸಂಚಾರ. ಈ ಸಂಚಾರದ ಪರಿಣಾಮವೇನು, ಸಾಮಾನ್ಯ ನಾಗರಿಕರು ಯಾವ ರೀತಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹಿಂದೆ ಮುಂದೆ ನೋಡದೆ ಧುಮುಕಿದರು ಎನ್ನುವುದನ್ನು ತಿಳಿದುಕೊಳ್ಳುವ ಮೊದಲು ಕೋಲಾರ ಜಿಲ್ಲೆಯ ಸ್ಥೂಲ ಪರಿಚಯವನ್ನು ಮಾಡಿಕೊಳ್ಳೋಣ.

## ಕೋಲಾರ ಜಿಲ್ಲೆ

೨೦೦೮ ನೆಯ ಇಸವಿಯವರೆಗೆ ಕೋಲಾರ ಜಿಲ್ಲೆಗೆ ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಗೌರಿಬಿದನೂರು, ಚಿಂತಾಮಣಿ, ಶಿಡ್ಲಘಟ್ಟ, ಮುಳಬಾಗಿಲು, ಶ್ರೀನಿವಾಸಪುರ, ಮಾಲೂರು, ಬಂಗಾರಪೇಟೆ, ಕೆ.ಜಿ.ಎಫ್, ಕೋಲಾರ ತಾಲ್ಲೂಕುಗಳು ಸೇರಿದ್ದುವು. ಆಡಳಿತಾತ್ಮಕ ದೃಷ್ಟಿಯಿಂದ ೨೦೦೮ ರಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳೆಂದು ಪ್ರತ್ಯೇಕಗೊಂಡವು. ಭಾವನಾತ್ಮಕವಾಗಿ ಇಂದಿಗೂ ಎರಡೂ ಜಿಲ್ಲೆಗಳು ಒಂದೇ ಆಗಿವೆ.

ಇಲ್ಲಿ ಕೋಲಾರ ಜಿಲ್ಲೆ ಎಂಬ ಪ್ರಸ್ತಾಪ ಬಂದಾಗಲೆಲ್ಲಾ ಅಖಂಡ ಕೋಲಾರ ಜಿಲ್ಲೆ, ಅಂದರೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಎಂದೇ ಅರ್ಥ ಮಾಡಿಕೊಳ್ಳಬೇಕಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವಲ್ಲಿ ಕೋಲಾರ ಜಿಲ್ಲೆ, ಬಹು ಹಿಂದಿನಿಂದಲೂ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ವೈವಿಧ್ಯಮಯ



ಟೇಕಲ್ ಬೆಟ್ಟ, ಸೀತಿಬೆಟ್ಟ, ಕುರುಡುಮಲೆ, ಆವನಿ ಬೆಟ್ಟ, ಆವನಿ ಗ್ರಾಮ, ಅಂಬಾಜಿದುರ್ಗ, ನಂದಿಬೆಟ್ಟ, ರೆಹಮಾನ್ ಗಢ್, ಇಟ್ಕಾಲ್ ದುರ್ಗ, ಮುಂತಾದ ಅನೇಕ ಬೆಟ್ಟಗುಡ್ಡಗಳು, ಗಿರಿ ಶ್ರೇಣಿ, ಗಿರಿ ದುರ್ಗಗಳು ಇದ್ದರೂ ಜಿಲ್ಲೆಯನ್ನು ಬಯಲು ಸೀಮೆಯೆಂದೇ ಗುರುತಿಸಲಾಗಿದೆ. ಇನ್ನು ಜಿಲ್ಲೆಯಲ್ಲಿ ನದಿ, ಉಪನದಿಗಳು, ಅನೇಕವಿವೆ. ಪಂಚನದಿಗಳ ನಾಡು ಇದು! ಪಾಲಾರ್, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ಪಾಪಾಘ್ನಿ ಹಾಗೂ ಚಿತ್ರಾವತಿ ನದಿಗಳು ಹರಿಯುವುದು ಇಲ್ಲೇ! ಹಾಗೇ ಕೌಂಡಿನ್ಯ, ವೃಷಭಾವತಿ, ಮಾರ್ಕಂಡೇಯ, ಉಪನದಿಗಳು ಇವೆ. ಆದರೆ ವರ್ಷವಿಡೀ ಹರಿಯುವ ಜೀವನದಿಗಳಾಗಿ ಯಾವುವೂ ಉಳಿದಿಲ್ಲ. ಆದುದರಿಂದಲೇ, ಕೋಲಾರ ಜಿಲ್ಲೆಯಲ್ಲಿರುವಷ್ಟು ಅಧಿಕವಾದ ಕೆರೆ–ಕುಂಟೆಗಳು ಬಹುಶಃ ಇನ್ನೆಲ್ಲೂ ಇಲ್ಲವೇನೋ ಅನ್ನುವಷ್ಟು ಕೆರೆ–ಕುಂಟೆ, ಕಟ್ಟೆ–ಕಾಲುವೆ ಮತ್ತು ಬಾವಿಗಳ ನಿರ್ಮಾಣ ಅಧಿಕವಾಗಿವೆ. ಕಾಲದಿಂದ ಕಾಲಕ್ಕೆ ಇಲ್ಲಿ ಆಳಿದ ರಾಜ ಮನೆತನಗಳು, ಪಾಳೆಯಗಾರರು ಅವುಗಳ ನಿರ್ಮಾಣ ಹಾಗೂ ದುರಸ್ತಿಯ ಬಗ್ಗೆ ಹೆಚ್ಚು ಕ್ರಮಗಳನ್ನು ಕೈಗೊಂಡಿರುವುದರ ಬಗ್ಗೆ ನಮಗೆ ದಾಖಲೆಗಳು ದೊರೆಯುತ್ತವೆ. ಜಿಲ್ಲೆಯಲ್ಲಿನ ಅನೇಕ ಊರುಗಳ ಹೆಸರುಗಳು ಸಹ ಕೆರೆ – ಕುಂಟೆ, ಸಮಗ್ರ ಸಾಗರ (ಸಮುದ್ರ ಇಲ್ಲಿ ಇಲ್ಲದಿದ್ದರೂ) ಎಂಬ ಹೆಸರಿನಿಂದ ಕೂಡಿರುವುದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಉದಾ – ಲಕ್ಷ್ಮೀಸಾಗರ, ದೇವರಾಯ ಸಮುದ್ರ, ಇತ್ಯಾದಿ.

ಜಿಲ್ಲೆಯ ಪ್ರಮುಖ ಸ್ಥಳಗಳಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ಪೌರಾಣಿಕ ಕಥೆಗಳು, ಸ್ಥಳೀಯವಾಗಿ ಹೆಣೆದಿರುವ ಐತಿಹ್ಯಗಳು, ದಂತ ಕಥೆಗಳು ವೈವಿಧ್ಯತೆಯಿಂದ ಕೂಡಿದೆ.

ಜಿಲ್ಲಾ ಕೇಂದ್ರ ಕೋಲಾರದಲ್ಲಿ ಶತಶೃಂಗ ಪರ್ವತ (ಅಂತರಗಂಗೆ ಬೆಟ್ಟ) ವನ್ನು ಪೌರಾಣಿಕವಾಗಿ ಗುರುತಿಸಲಾಗಿದೆ. ಶತಶೃಂಗ ಋಷಿಗಳ ತಪೋ ಭೂಮಿ ಎಂದು ಹೇಳುವ ಈ ಬೆಟ್ಟದ ಮೇಲೆ ಏಳು ಗ್ರಾಮಗಳಿವೆ. ಈ ಗ್ರಾಮಗಳಲ್ಲಿ ರೈತರು ವಾಸ ಮಾಡುತ್ತಿದ್ದಾರೆ. ಅಲ್ಲಿನ ಬಾವಿಯ ತುಂಬಾ ನೀರು! ಈ ಸೌಕರ್ಯದಿಂದಾಗಿ ಕೃಷಿ ಚಟುವಟಿಕೆಗಳು ಚುರುಕಿನಿಂದ ನಡೆಯುತ್ತಿರುತ್ತದೆ. ಇತ್ತೀಚೆಗೆ ರಸ್ತೆ ನಿರ್ಮಾಣವಾಗಿದೆ.

ಕೋಲಾರ ಎಂಬ ಹೆಸರು ಹೇಗೆ ಬಂತು ಎಂಬುದನ್ನು ವಿವಿಧ ದೃಷ್ಟಿಕೋನಗಳಿಂದ ವಿವರಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಹೀಗೆ ಸಂಗ್ರಹಿಸಬಹುದು.

೧. ಈ ಪ್ರದೇಶವು ಪರಶುರಾಮರ ತಂದೆ ಜಮದಗ್ನಿ ಋಷಿ ಹಾಗೂ ತಾಯಿ ರೇಣುಕೆಯರ ತಪೋಭೂಮಿಯಾಗಿದ್ದು ಜಮದಗ್ನಿ ಋಷಿಯ ಆಶ್ರಮದಲ್ಲಿದ್ದ ಸುರಭಿ (ಕಾಮಧೇನು) ಎಂಬ ಹಸುವನ್ನು ತನಗೆ ಬೇಕೆಂದು ಕಾರ್ತವೀರ್ಯಾರ್ಜುನ ರಾಜನು ಒತ್ತಾಯ ಮಾಡುತ್ತಾನೆ. ಅಲ್ಲದೆ ತನಗೆ ಆ ಹಸು ಸಿಗದಿದ್ದಾಗ ಮೋಸದಿಂದ ಕಾರ್ತವೀರ್ಯಾರ್ಜುನನು ಜಮದಗ್ನಿಯನ್ನು ಕೊಂದುಹಾಕುತ್ತಾನೆ. ಇದರಿಂದ ಕೋಪಗೊಂಡ ಪರಶುರಾಮನು ಇಡೀ ಕ್ಷತ್ರಿಯ ಕುಲವನ್ನೇ ನಾಶ ಮಾಡುತ್ತೇನೆ ಎಂದು ಶಪಥ ಮಾಡುತ್ತಾನೆ. ಅವರಿಬ್ಬರ ನಡುವೆ ಹೋರಾಟ ನಡೆದು ಕಾರ್ತವೀರ್ಯಾರ್ಜುನನು ಸೋತು ಹೋಗುತ್ತಾನೆ. ಅವನನ್ನು ಕೊಲ್ಲುವ ಸಂದರ್ಭದಲ್ಲಿ ಅಲ್ಲಿ ಉಂಟಾದ ಕೋಲಾಹಲದಿಂದ ಜನ ಮೂಕವಿಸ್ಮಿತರಾಗುತ್ತಾರೆ. ಆದ್ದರಿಂದ ಈ ಪ್ರದೇಶಕ್ಕೆ ಕೋಲಾಹಲಪುರ ಎಂಬ ಹೆಸರು ಬಂತು. ಮುಂದೆ ಅದೇ ಕೋಲಾರ ಆಯಿತು. ಇದಕ್ಕೆ ಪೂರಕವೆಂಬಂತೆ ಕೋಲಾರ ಕೆರೆಯ ಅಂಚಿನಲ್ಲಿ ಪೂರ್ವದ ಕಡೆಗೆ ಅಪರೂಪದ ಪರಶುರಾಮರ ದೇವಾಲಯವಿದೆ. ಅಲ್ಲದೆ ಪರಶುರಾಮರ ತಾಯಿ ರೇಣುಕೆಯನ್ನು ಕೋಲಾರಮ್ಮನ ರೂಪದಲ್ಲಿ ಪ್ರತಿಷ್ಠಾಪನೆ ಮಾಡಿದ ಐತಿಹ್ಯ ಒಂದಿದೆ. ಕೋಲಾರಮ್ಮ ದೇವಾಲಯ ಸುಂದರವಾಗಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು.

೨. ಗೊಲ್ಲನಾದ ಕೋಲ ಎಂಬುವವನು ಉಳುತ್ತಿದ್ದಾಗ, ಅವನ ನೇಗಿಲಿಗೆ (ಹಲ) ನಿಧಿಯಿದ್ದ ಒಂದು ಕೊಡ ಸಿಕ್ಕಿತ್ತಂತೆ. ಆ ನಿಧಿಯನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಆಗ ಆಳುತ್ತಿದ್ದ ಉತ್ತಮ ಚೋಳರಾಜನು ರಾಜಧಾನಿಯಾದ ಕಂಚಿ ನಗರಕ್ಕೆ ಕೋಲನನ್ನು ಕರೆಯಿಸಿದನಂತೆ. ಅದೇ ದಿನ ರಾತ್ರಿ ರೇಣುಕಾದೇವಿ ರಾಜನ ಕನಸಿನಲ್ಲಿ ಕಾಣಿಸಿಕೊಂಡು ತನ್ನ ಭಕ್ತನಾದ ಕೋಲನನ್ನು ಗೌರವದಿಂದ ಕಾಣಬೇಕು. ಹಾಗೂ ಅವನಿಗೆ ಸಿಕ್ಕಿರುವ ನಿಧಿಯನ್ನು ತನ್ನ ದೇವಾಲಯ ನಿರ್ಮಾಣ ಕಾರ್ಯಕ್ಕೆ ಬಳಸಿಕೊಳ್ಳಬೇಕೆಂದು



ಆಜ್ಞಾಪಿಸಿದಳಂತೆ. ಅದೇ ಪ್ರಕಾರ ರೇಣುಕಾದೇವಿಯ ದೇವಾಲಯ ನಿರ್ಮಾಣ ಮಾಡಿ, ಕೋಲನನ್ನು ಅಲ್ಲಿನ ಅಧಿಕಾರಿಯಾಗಿ ನೇಮಿಸಿದನಂತೆ ಕೋಲಾನ ಕಾರಣದಿಂದಾಗಿ ಈ ಪ್ರಾಂತಕ್ಕೆ ಕೋಲಾರ ಹೆಸರು ಬಂದಿತಂತೆ.

೩. ಇನ್ನೊಂದು ತರ್ಕವನ್ನು ಇಲ್ಲಿ ಪ್ರಸ್ತಾಪ ಮಾಡಬಹುದಾಗಿದೆ. ಕೋಲಾರ ಎಂಬ ಪದ ಕೊಳ್ಳ + ಹಳ್ಳ ಎಂಬ ನೀರಿಗೆ ಸಂಬಂಧಪಟ್ಟ ಪದಗಳ ಸಂಯುಕ್ತ ರೂಪ ಎನ್ನಲಾಗಿದೆ.

೪. ಚಾರಿತ್ರಿಕ – ಪೌರಾಣಿಕ ಹಿನ್ನೆಲೆಯಲ್ಲಿ ಕೋಲಾಹಲ, ಕೊಲಹಳ, ಕೋಳಾಲ, ಕೋಳಾಲಪುರ, ಕುವಲಾಳ ಎಂಬ ನಿಷ್ಪತ್ತಿಯನ್ನು ವಿವೇಚನೆ ಮಾಡುವ ಕೋಲಾರ ಹೆಸರಿನ ಈ ಜಿಲ್ಲೆ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

**ರಾಜಕೀಯ ಇತಿಹಾಸ**

ನಾಡಿಗೆ ಮತ್ತು ರಾಷ್ಟ್ರಕ್ಕೆ ತನ್ನ ಒಡಲ ಚಿನ್ನವನ್ನು ಧಾರೆ ಎರೆದು ಚಿನ್ನದ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಕೋಲಾರ ಜಿಲ್ಲೆ. ರೇಷ್ಮೆ, ಪುಷ್ಪಕೃಷಿ, ಪಶುಸಂಗೋಪನೆ, ಕ್ಷೀರ, ಕೃಷಿ, ಸಾಹಿತ್ಯ, ವಿಜ್ಞಾನ ಹಾಗೂ ತಂತ್ರಜ್ಞಾನಗಳಲ್ಲಿ ಜಗತ್ತಿಗೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿರುವ ಹೆಮ್ಮೆಯ ಜಿಲ್ಲೆ. ಒಂದು ಕಾಲದಲ್ಲಿ ಸಿಲ್ಕ್ – ಮಿಲ್ಕ್ – ಗೋಲ್ಡ್ ಎಂಬ ಮೂರು ಕ್ಷೇತ್ರಗಳ ಕೊಡುಗೆಯಲ್ಲಿ ಮುಂಚೂಣಿಯಲ್ಲಿತ್ತು. ಈಗ ಚಿನ್ನದ ಕೊಡುಗೆಗೆ ಒಂದು ನಿಲುಗಡೆ ಬಂದಿದೆ. ಆದರೆ ಸಿಲ್ಕ್ ಮತ್ತು ಮಿಲ್ಕ್, ಹಣ್ಣು – ತರಕಾರಿಗಳ ರಾಜಧಾನಿ ಎನಿಸಿಕೊಂಡಿದೆ.

ರಾಜಕೀಯ ಕ್ಷೇತ್ರದಲ್ಲಿ ಜಿಲ್ಲೆಯ ಪಾತ್ರ ವಿಶಿಷ್ಟವಾಗಿದೆ. ಮೈಸೂರು ರಾಜ್ಯಕ್ಕೆ ಮೊದಲ ಮುಖ್ಯಮಂತ್ರಿ ಕ್ಯಾಸಂಬಳ್ಳಿ ಚಂಗಲ ರಾಯರೆಡ್ಡಿಯವರನ್ನು ಕೊಡುಗೆಯಾಗಿ ನೀಡಿದ ಹೆಮ್ಮೆ ಈ ಜಿಲ್ಲೆಯದು. ಜನಪರ ಹೋರಾಟಗಳು, ಜನರ ವಿಶಿಷ್ಟ ಸಂಸ್ಕೃತಿಯನ್ನು ಮೆರೆದಿರುವ ಕೋಲಾರ ಐತಿಹಾಸಿಕವಾಗಿ ೨ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಗಂಗರಸರ ರಾಜಧಾನಿಯಾಗಿ ಮೆರೆದ ಕೋಲಾರ, ನಂತರ ಚೋಳರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೪ನೆಯ

ಶತಮಾನದಿಂದ ೧೯ನೆಯ ಶತಮಾನದವರೆಗೆ ಕದಂಬ, ಪಲ್ಲವ, ಚೋಳ, ಚಾಲುಕ್ಯ, ಹೊಯ್ಸಳ, ರಾಷ್ಟ್ರಕೂಟ ಅರಸರು, ಮೈಸೂರಿನ ಅರಸರು, ಮರಾಠರು, ಪಾಳೆಯಗಾರರು, ಹೈದರಾಲಿಯ ನಂತರ ಟಿಪ್ಪು ಸುಲ್ತಾನನ ಆಳ್ವಿಕೆಗೆ ಒಳಪಟ್ಟಿತ್ತು.

## ಹೈದರಾಲಿ ಖಾನ್

ಇಲ್ಲಿ ಹೈದರಾಲಿಯ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆಯಲ್ಲಿ ಹೈದರಾಲಿ ಹುಟ್ಟಿದ್ದು, ಪಂಜಾಬ್ ಪ್ರಾಂತ್ಯದವರು ಇವನ ಪೂರ್ವಿಕರು, ಇವನ ತಂದೆ ಶಿರಾದ ನವಾಬನ ಸೇನೆಯಲ್ಲಿದ್ದ ಫತೆ ಮಹಮ್ಮದ್. ಬಾಲ್ಯವನ್ನು ಕಾಡು ಮೇಡುಗಳಲ್ಲಿ ಅಲೆಯುತ್ತಾ, ಬೇಟೆಯಾಡುತ್ತಾ ಕಳೆದ. ಎಲ್ಲೂ ಶಾಲಾ ಶಿಕ್ಷಣವೇ ಇಲ್ಲವಾಯಿತು. ನಿರಕ್ಷರ ಕುಕ್ಷಿಯಾಗಿದ್ದ ಹೈದರಾಲಿಯ ಸಹಿ ಕಠಾರಿಯ ಗುರುತು!.

ತರುಣ ಹೈದರಾಲಿ ಮೈಸೂರು ಸೇನೆಯನ್ನು ಸೇರಿದ. ತನ್ನ ಶೌರ್ಯಸಾಹಸಗಳಿಂದ ಹಂತ ಹಂತವಾಗಿ ಮೇಲಕ್ಕೇರಿದ. ದಳವಾಯಿಯೂ ಆದ. ಮೈಸೂರು ರಾಜ್ಯದ ಗಡಿಗಳನ್ನು ವಿಸ್ತರಿಸಲು ಹಲವು ಯುದ್ಧಗಳನ್ನು ಮಾಡಿದ. ಇದರಿಂದ ನೆರೆ ಹೊರೆಯ ಮರಾಠರು ನಿಜಾಮ ಮತ್ತು ಬ್ರಿಟಿಷರಿಗೆ ಅಸೂಯೆ ಉಂಟಾಯಿತು.

೧೭೬೧ ರಲ್ಲಿ ಕೋಲಾರ ಹೈದರನ ಅಧೀನಕ್ಕೆ ಬಂದಿತು. ೧೭೬೭ ರಲ್ಲಿ ಬ್ರಿಟಿಷ್ ಕರ್ನಲ್ ಸ್ಮಿತ್ ಹಾಗೂ ಕರ್ನಲ್‌ವುಡ್‌ರ ಸೇನಾಪಡೆಗಳ ಸೈನಿಕ ಚಟುವಟಿಕೆಗೆ ಕೋಲಾರ ತುತ್ತಾಗಬೇಕಾಯಿತು. ಆ ವರ್ಷದ ಮಧ್ಯಭಾಗದಲ್ಲಿ ಕರ್ನಲ್ ಸ್ಮಿತ್‌ನ ರೆಜಿಮೆಂಟ್ ಕೋಲಾರ ಹಾಗೂ ಮುಳಬಾಗಿಲು ಪ್ರದೇಶಗಳನ್ನೊಳಗೊಂಡಂತೆ ಅನೇಕ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿತು.

ಮುಳಬಾಗಿಲನ್ನು ೧೭೬೮ ರಲ್ಲಿ ಹೈದರನು ಭೀಕರ ಕದನದ ಮೂಲಕ ವಶಪಡಿಸಿಕೊಂಡನು. ಇದರಿಂದಾಗಿ ಕರ್ನಲ್ ಸ್ಮಿತ್‌ನನ್ನು ಮದರಾಸಿಗೆ ವಾಪಸ್ಸು ಕರೆಸಿಕೊಂಡು ಅವನ ಸ್ಥಾನಕ್ಕೆ ವುಡ್‌ನನ್ನು ನಿಯೋಜಿಸಲಾಯಿತು. ೧೭೬೮ ನವೆಂಬರ್‌ನಲ್ಲಿ ಹೊಸೂರನ್ನು ಹೈದರನಿಂದ ಮುಕ್ತಗೊಳಿಸಲು ಇವನು ಹೊರಟನು. ಆದರೆ ಯುದ್ಧ ಸಾಮಗ್ರಿ ಹಾಗೂ ಮದ್ದು ಗುಂಡುಗಳನ್ನು



ಬಾಗಲೂರಿನಲ್ಲೇ ಬಿಟ್ಟು ಹೊಸೂರಿನತ್ತ ಕರ್ನಲ್‌ವುಡ್ ಬರುತ್ತಿರುವುದನ್ನು ತಿಳಿದ ಹೈದರನು ಬಳಸು ಮಾರ್ಗದಿಂದ ಬಂದು ಬಾಗಲೂರಿಗೆ ಮುತ್ತಿಗೆ ಹಾಕಿ ಅಲ್ಲಿದ್ದ ಆಹಾರ ಸಾಮಗ್ರಿ, ಯುದ್ಧ ಸಲಕರಣೆ, ಮದ್ದು ಬಂದೂಕುಗಳ ಜೊತೆಗೆ ಹೇರನ್ನು ಹೊತ್ತು ನಿಂತಿದ್ದ ದನಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು.

ಕೋಲಾರದ ಕಡೆಗೆ ಹೋಗುತ್ತಿದ್ದ ವುಡ್‌ನ ಮೇಲೆ ಆಲೇರಿಯ ಹತ್ತಿರ ಇದ್ದಕ್ಕಿದ್ದಂತೆ ದಾಳಿ ಮಾಡಿದ ಹೈದರನು ದೊಡ್ಡದಾದ ಹನ್ನೆರಡು ಫಿರಂಗಿಗಳನ್ನು ಉಡಾಯಿಸಿದನು. ಕರ್ನಲ್ ವುಡ್ ಮರುದಾಳಿ ಮಾಡಲಿಲ್ಲ. ಬ್ರಿಟಿಷ್ ಸೈನ್ಯ ನಲುಗಿ ಹೋಯಿತು. ಕೋಲಾರದ ಹತ್ತಿರ ವಿಶ್ರಾಂತಿ ಪಡೆದು ಮುಂದುವರೆಯುವುದೆಂದು ಫಿಟ್ಜೆರಾಲ್ಡ್ ಆಲೋಚನೆ ಮಾಡಿ ಸಲಹೆ ಮಾಡಿದರೂ ವುಡ್ ಒಪ್ಪಲಿಲ್ಲ. ಇದರ ಪರಿಣಾಮ ವುಡ್‌ನನ್ನು ಸೇನೆಯಿಂದ ತೆಗೆದುಹಾಕಲಾಯಿತು.

೧೭೭೧ ರಲ್ಲಿ ಮತ್ತೆ ಸಂಸ್ಥಾನ ಮರಾಠರ ದಾಳಿಯನ್ನು ಎದುರಿಸಬೇಕಾಯಿತು. ಹೈದರನಿಗೆ ಯಶಸ್ಸು ಸಿಗಲಿಲ್ಲ. ಮರಾಠ ಮತ್ತು ಹೈದರನ ಮಧ್ಯೆ ಸಂಧಾನವಾಯಿತು. ೩೫ ಲಕ್ಷ ರೂಪಾಯಿಗಳ ಯುದ್ಧ ದಂಡ ನೀಡಲು ಸಾಮರ್ಥ್ಯವಿಲ್ಲದ ಹೈದರ್ ಅರ್ಧದಷ್ಟು ನೀಡಿ, ಉಳಿದ ಅರ್ಧಕ್ಕೆ ಸಂದಾಯ ಮಾಡುವವರೆಗೆ ಕೋಲಾರ, ಹೊಸಕೋಟೆ, ದೊಡ್ಡಬಳ್ಳಾಪುರ, ಶಿರಾ, ಮಧುಗಿರಿ, ಚನ್ನರಾಯ ದುರ್ಗ ಹಾಗೂ ಗುರ್ರಮಕೊಂಡಗಳನ್ನು ಬ್ರಿಟಿಷರಿಗೆ ಒತ್ತೆ ಇಡಬೇಕಾಯಿತು.

ಎರಡನೆಯ ಆಂಗ್ಲೋ ಮೈಸೂರು ಯುದ್ಧ ನಡೆದುದು ೧೭೮೦ – ೮೨ ರಲ್ಲಿ. ಆಗಲೇ ಹೈದರಾಲಿ ದಕ್ಷಿಣ ಆರ್ಕಾಟ್ ಹತ್ತಿರದ ನರಸಿಂಹ ಪೇಟೆಯಲ್ಲಿ ಮಡಿದ. ಆದರೆ ಅವನ ಸಾವನ್ನು ಗುಟ್ಟಾಗಿಡಲಾಯಿತು. ಶವವನ್ನು ಕೋಲಾರಕ್ಕೆ ತಂದು, ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಕರಾವಳಿಯ ಭಾಗದಲ್ಲಿ ತೊಡಗಿದ್ದ ಟಿಪ್ಪುವನ್ನು ಕರೆದು ಅಧಿಕಾರವನ್ನು ನೀಡಲಾಯಿತು. ಹೈದರಾಲಿಯ ಶವವನ್ನು ಶ್ರೀರಂಗಪಟ್ಟಣಕ್ಕೆ ರವಾನಿಸಿ ಅಲ್ಲಿ ಸಮಾಧಿ ಮಾಡಲಾಯಿತು.

## ಟಿಪ್ಪು ಸುಲ್ತಾನ್

ಬಾಲ್ಯದಲ್ಲಿ ಉತ್ತಮ ಶಿಕ್ಷಣ ಪಡೆದುಕೊಂಡಿದ್ದ ಟಿಪ್ಪು ಸುಲ್ತಾನ್ ತಂದೆಯಂತೆ ಸಾಹಸಿಯೂ, ಚಾಣಾಕ್ಷನೂ ಆಗಿದ್ದ. ಟಿಪ್ಪು ಬ್ರಿಟಿಷರನ್ನು ಸಂಸ್ಥಾನದಿಂದ ದೂರವಿಡುವ ಉದ್ದೇಶದಿಂದ ಅವರ ವಿರುದ್ಧ ಒಕ್ಕೂಟವನ್ನು ರೂಪಿಸಲು ಮುಂದಾಗಿದ್ದನು. ಬ್ರಿಟಿಷ್ ವಿರೋಧಿಯಾದ ಟಿಪ್ಪು ಬ್ರಿಟಿಷರ ವಿರುದ್ಧ ಮೂರನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಸಿದ್ಧವಾದನು.

೧೭೯೦–೯೨ ರಲ್ಲಿ ಮೂರನೆಯ ಆಂಗ್ಲೋ – ಮೈಸೂರು ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ಚಿತ್ತೂರಿನಿಂದ ಬೆಂಗಳೂರು ಕಡೆಗೆ ಮುಗಳಿ ಪರ್ವತ ಶ್ರೇಣಿಯ ಮೂಲಕ ಸಾಗುತ್ತಿದ್ದ ಲಾರ್ಡ್ ಕಾರ್ನ್‌ವಾಲೀಸನು ಮಾರ್ಗಮಧ್ಯದಲ್ಲಿನ ಕೋಲಾರವನ್ನು ೧೭೯೧ ರಲ್ಲಿ ಸ್ವಾಧೀನಪಡಿಸಿಕೊಂಡನು, ಆದರೆ ೧೭೯೨ ರಲ್ಲಿ ಟಿಪ್ಪುವಿಗೆ ಹಿಂತಿರುಗಿಸಲಾಯಿತು. ನಂದಿದುರ್ಗ ಬ್ರಿಟಿಷರ ಸೇನಾನೆಲೆಯಾಗಿ ಮುಂದುವರೆದಿದ್ದು ಗಮನಾರ್ಹ. ಈ ಯುದ್ಧದಲ್ಲಿ ಟಿಪ್ಪುವಿಗೆ ಹೀನಾಯ ಸೋಲಾಯಿತು. ಆರ್ಥಿಕವಾಗಿ ಕುಸಿದು ಹೋದನು. ಸಾಕಷ್ಟು ಪ್ರದೇಶಗಳು, ಕೈಬಿಟ್ಟು ಹೋದುದಲ್ಲದೆ ಶ್ರೀರಂಗಪಟ್ಟಣ, ಒಪ್ಪಂದದ ಪ್ರಕಾರ, ಯುದ್ಧ ದಂಡವನ್ನು ಸಂಪೂರ್ಣವಾಗಿ ಕೊಡಲಾರದೆ, ಬಾಕಿ ಮೊತ್ತ ಕೊಡುವವರೆಗೆ ತನ್ನ ಇಬ್ಬರು ಮಕ್ಕಳನ್ನು ಬ್ರಿಟಿಷರಲ್ಲಿ ಒತ್ತೆ ಇಟ್ಟನೆಂದು ಇತಿಹಾಸ ಹೇಳುತ್ತದೆ.

ಈ ಸೋಲಿನಿಂದ ಗಾಯಗೊಂಡ ಹುಲಿಯಂತಾಗಿದ್ದ ಟಿಪ್ಪು ತನ್ನ ಎಲ್ಲಾ ಶಕ್ತಿಯನ್ನು ಬ್ರಿಟಿಷರ ವಿರುದ್ಧ ಕ್ರೋಡೀಕರಿಸಲು ನಿರ್ಧರಿಸಿದನು. ಇದಕ್ಕಾಗಿ ಬ್ರಿಟಿಷರ ಶತ್ರುವಾಗಿದ್ದ ನೆಪೋಲಿಯನ್‌ನ ನೆರವು ಕೋರಿದನಾದರೂ ಅದು ಯಶಸ್ವಿಯಾಗಲಿಲ್ಲ. ೧೭೯೯ ರಲ್ಲಿ ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧ ನಡೆಯಿತು. ಆಗ ಟಿಪ್ಪು ಏಕಾಂಗಿಯಾಗಿ ಹೋರಾಡುತ್ತಾ ಮರಣಿಸಿದ. ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಟಿಪ್ಪು ಮರಣಿಸಿದ್ದು ಬ್ರಿಟಿಷರಿಗೆ ನೆಮ್ಮದಿಯಿಂದ ಉಸಿರಾಡುವಂತಾಯಿತು. ಟಿಪ್ಪು ಆಳಿದ ರಾಜ್ಯವನ್ನು ವಿಭಜನೆ ಮಾಡಿ ಬ್ರಿಟಿಷರು ಹಾಗೂ ಮರಾಠರು ಮಧ್ಯೆ ಹಂಚಲಾಯಿತು. ಹೈದರನು ಅಧಿಕಾರಕ್ಕೆ ಬರುವ ಮೊದಲಿದ್ದ ಸಂಸ್ಥಾನದ ಪ್ರದೇಶಗಳನ್ನು ಮಾತ್ರವೇ ಮೈಸೂರು ಅರಸರಿಗೆ ನೀಡುವ ಮೂಲಕ ಅರಸರ ಆಡಳಿತಕ್ಕೆ ಮರುಜೀವ ನೀಡಲಾಯಿತು.



ಟಿಪ್ಪು ಮರಣಾನಂತರ ಆಡಳಿತಕ್ಕೆ ಬಂದುದು ಮೈಸೂರು ಒಡೆಯರು. ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಮೈಸೂರು ಅರಸು ಮನೆತನಕ್ಕೆ ಸಂಸ್ಥಾನವನ್ನು ಆಳಲು ಅವಕಾಶ ಲಭಿಸಿತು. ೧೭೯೯ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನವನ್ನು ಏರಿದರು. ಅಲ್ಲಿಂದ ಈಚೆಗೆ ಕೋಲಾರ ಜಿಲ್ಲಾ ಪ್ರದೇಶವು ಮೈಸೂರು ಅರಸರ ಸುಪರ್ದಿಗೆ ಒಳಪಟ್ಟು, ಸಂಸ್ಥಾನದ ಅವಿಭಾಜ್ಯ ಅಂಗವಾಗಿ ಮುಂದುವರೆಯಿತು.

ಆದರೆ ಇದು ತಾತ್ಕಾಲಿಕವಾಯಿತು. ಪುನಃ ಸಂಸ್ಥಾನದ ಆಡಳಿತವು ಬ್ರಿಟಿಷ್ ಕಮೀಷನ್ನರುಗಳ ಆಡಳಿತಕ್ಕೆ ಒಳಪಡುವಂತಾಯಿತು. ೧೮೮೧ ರಲ್ಲಿ ಕಮೀಷನ್ನರುಗಳ ಆಡಳಿತ ಅಂತ್ಯದೊಂದಿಗೆ ಸಂಸ್ಥಾನದ ಆಡಳಿತ ಪುನರಾರಂಭವಾಯಿತು. ಆಗ ಆಡಳಿತ ನಡೆಸಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ್. ಈ ಅವಧಿಯಲ್ಲಿ ದಿವಾನರ ಪಾತ್ರ ಮಹತ್ವದ್ದಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯನ್ನು ಗಾಂಧೀಜಿಯವರು ರಾಮರಾಜ್ಯ ಮಾದರಿ ರಾಜ್ಯ ಎಂದು ಮೆಚ್ಚಿಕೊಂಡಿದ್ದರು.

## ಸಂಸ್ಥಾನದಲ್ಲಿ ರಾಜಕೀಯ ಜಾಗೃತಿ

ಬ್ರಿಟಿಷ್ ಕಮೀಷನ್ನುರುಗಳು, ಆಡಳಿತಕ್ಕೆ ಬಂದ ನಂತರ ಸಂಸ್ಥಾನದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬದಲಾವಣೆ. ಜನಜಾಗೃತಿ ಉಂಟಾಗತೊಡಗಿತ್ತು. ಎಲ್ಲಕ್ಕಿಂತ ಬಹು ಮುಖ್ಯವಾಗಿ ರಾಜಕೀಯ ಆಗುಹೋಗುಗಳ ಬಗ್ಗೆ ಅರಿವು ಮೂಡುತ್ತಾ ಬಂತು. ಈ ದಿನಗಳಲ್ಲಿ ಸಂಸ್ಥಾನದಲ್ಲಿ ದಿವಾನರ ಪಾತ್ರ ಮಹತ್ವದ್ದಾಯಿತು. ೧೯೯೧ ರಲ್ಲಿ ಮೈಸೂರು ಸಂಸ್ಥಾನದ ದಿವಾನ್ ರಂಗಾಚಾರ್ಲು ಅವರ ಸೇವಾ ಅವಧಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯು ಆರಂಭಗೊಂಡಿತು. ಇದು ದೇಶದಲ್ಲೇ ಪ್ರಪ್ರಥಮ ಪ್ರಜಾ ಪ್ರತಿನಿಧಿ ಸಭೆ ಎನ್ನಬಹುದು. ಇದರ ಸದಸ್ಯರು ಚುನಾವಣೆಯ ಮೂಲಕ ಆಯ್ಕೆಗೊಳ್ಳಲಿಲ್ಲ. ಆದರೆ ಸಾರ್ವಜನಿಕರ ಕುಂದುಕೊರತೆಗಳನ್ನು ರಾಜಪ್ರಭುತ್ವದ

ಗಮನಕ್ಕೆ ತರುವ ಮೂಲಕ ಮಹತ್ವದ ಪಾತ್ರ ವಹಿಸಲು ಆರಂಭಿಸಿದರು. ಈ ಸಭೆಯ ಮೊದಲ ಸಮಾವೇಶ ೧೮೮೧ ನಡೆದಾಗ ಕೋಲಾರ ಜಿಲ್ಲೆಯಿಂದ ಪ್ರತಿನಿಧಿಗಳು ಪಾಲ್ಗೊಂಡಿದ್ದರೆಂಬುದು ಉಲ್ಲೇಖಾರ್ಹ. ಇದರ ಪರಿಣಾಮವಾಗಿ ೧೮೮೫ ರಲ್ಲಿ ರಾಷ್ಟ್ರಮಟ್ಟದಲ್ಲಿ ಭಾರತೀಯ ರಾಷ್ಟ್ರೀಯ ಪಕ್ಷವು ಸ್ಥಾಪನೆಯಾಯಿತು. ಕ್ರಮೇಣ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಆಂದೋಲನಕ್ಕೆ ಇದು ಭದ್ರ ವೇದಿಕೆಯಾಯಿತು.

೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆ ಆರಂಭ ಮಾಡಿದವರು ದಿವಾನ್ ವಿ. ಮಾಧವರಾವ್ ರವರು. ಇದು ಸಂಸ್ಥಾನದ ದ್ವಿಸದನ ಶಾಸನಾಂಗ ವ್ಯವಸ್ಥೆಗೆ ನಾಂದಿಯಾಯಿತು. ಇದರ ಪರಿಣಾಮ ದಿನದಿಂದ ದಿನಕ್ಕೆ ಜನಜಾಗೃತಿ ಹೆಚ್ಚಾಯಿತು. ಜನರನ್ನು ಪ್ರತಿನಿಧಿಸುವ ಪ್ರಜಾಮಿತ್ರ ಮಂಡಳಿ ಸಂಸ್ಥಾನದಲ್ಲಿ ತಲೆ ಎತ್ತಿತು. ಆಡಳಿತದಲ್ಲಿ ಪ್ರಜೆಗಳು ಭಾಗವಹಿಸುವುದು ಹೆಚ್ಚಾಯಿತು. ಸಂಸ್ಥಾನದ ಅವಿಭಾಜ್ಯ ಅಂಗ ಕೋಲಾರ ಜಿಲ್ಲೆಯಲ್ಲಿಯೂ ಇದರ ಪ್ರಭಾವ ಕಂಡುಬಂದಿತು.

ಅಂತಹ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಹಾದಿಗೆ ಕೋಲಾರ ಜಿಲ್ಲೆಯಲ್ಲಿ ಒಂದು ಮಹತ್ತರ ತಿರುವು ಸಿಕ್ಕಂತಾಯಿತು. ೧೯೧೫ ರ ಮೇ ೨೦ ರಂದು ಗಾಂಧೀಜಿಯವರು ಮದರಾಸಿನಿಂದ ಬೆಂಗಳೂರಿಗೆ ಒಂದು ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಮಾರ್ಗ ಮಧ್ಯದಲ್ಲಿ ರೈಲು ಬಂಗಾರಪೇಟೆ ರೈಲು ನಿಲ್ದಾಣದಲ್ಲಿ ಗುಜರಾತಿ ವರ್ತಕ ಸಮುದಾಯದವರು ಗಾಂಧೀಜಿಯವರಿಗೆ ಪುಷ್ಪಮಾಲೆಯನ್ನು ಅರ್ಪಿಸಿ ಸನ್ಮಾನಿಸಿದರು. ಸಂಸ್ಥಾನಕ್ಕೆ – ಜಿಲ್ಲೆಗೆ ಗಾಂಧೀಜಿಯವರ ಮೊದಲ ಭೇಟಿ ಇದು. ಹಾಗೂ ಸಂಸ್ಥಾನದಲ್ಲಿ ಮೊದಲಿಗರಾಗಿ ಗೌರವ ಸಮರ್ಪಣೆ ಮಾಡಿದ ಹೆಮ್ಮೆ ಬಂಗಾರಪೇಟೆಯ ಜನತೆಯದು ಎಂಬುದು ಉಲ್ಲೇಖಾರ್ಹ. ಅಂದು ಬಂಗಾರಪೇಟೆಯಲ್ಲಿ ಗಾಂಧೀಜಿಯವರನ್ನು ನೋಡಿದ, ಅವರ ಸರಳ ಸ್ವಭಾವವನ್ನು ಗಮನಿಸಿದ ಜನರು ಅವರಿಗೆ ಮಾರು ಹೋದರು.

ಬಂಗಾರಪೇಟೆಯಲ್ಲಿ ಕಾಲದಿಂದ ಕಾಲಕ್ಕೆ ಸ್ವಾತಂತ್ರ್ಯ ಹೋರಾಟ ಯಾವ ರೀತಿ ನಡೆಯಿತು. ಅದಕ್ಕೆ ಪ್ರೇರಣೆ ಎಲ್ಲಿಂದ ಬಂತು, ಅದರ ಮೂಲ ಎಲ್ಲಿ ಎಂಬುದರ ಸ್ಥೂಲ ಪರಿಚಯವನ್ನು ಇಲ್ಲಿ ನೋಡಬಹುದು.



## ಬಂಗಾರಪೇಟೆ

ಕೋಲಾರದ ದಕ್ಷಿಣಕ್ಕೆ ೧೮ ಕಿಲೋಮೀಟರ್ ದೂರದಲ್ಲಿರುವ ಬಂಗಾರಪೇಟೆಯ ಮೂಲ ಹೆಸರು ಮರಮುಟ್ಲು. ೧೮೬೪ ರಲ್ಲಿ ಆರಂಭಗೊಂಡಾಗ ಸ್ಥಾಪಿಸಿದ ಗ್ರಾಮಕ್ಕೆ ಮೈಸೂರಿನ ಚೀಫ್ ಕಮೀಷನರ್ ಆಗಿದ್ದ ಎಲ್.ಬಿ.ಬೌರಿಂಗ್ ಅವರ ಹೆಸರಿನಲ್ಲಿ ಬೌರಿಂಗ್‌ಪೇಟೆ ಎಂದು ಕರೆಯಲಾಯಿತು. ೧೯೪೮ ರಲ್ಲಿ ಸ್ವಾತಂತ್ರ್ಯಾ ನಂತರ ಇದಕ್ಕೆ ಬಂಗಾರಪೇಟೆ ಎಂದು ಹೆಸರನ್ನು ಬದಲಾಯಿಸಲಾಯಿತು. ಪಕ್ಕದ ಪ್ರದೇಶದಲ್ಲಿ ಬಂಗಾರದ ಗಣಿ ಇದೆ. ಬಂಗಾರವನ್ನು ನೀಡುತ್ತಿರುವ ಪೇಟೆ ಬಂಗಾರಪೇಟೆ ಎಂದಾಯಿತು. ಬಂಗಾರಪೇಟೆ ವಾಣಿಜ್ಯ ವಹಿವಾಟುಗಳಿಗೆ ಕೇಂದ್ರವಾಗಿದೆ ಮತ್ತು ಮುಖ್ಯವಾಗಿ ಬೆಂಗಳೂರು – ಚೆನ್ನೈ ರೈಲು ಮಾರ್ಗದ ಮುಖ್ಯ ನಿಲ್ದಾಣ ಹಾಗೂ ರೈಲ್ವೆ ಜಂಕ್ಷನ್ ಇರುವುದು ಬಂಗಾರಪೇಟೆಯ ಸುತ್ತಮುತ್ತಲ ಗ್ರಾಮಗಳ ಜನರಿಗೆ ತುಂಬಾ ಅನುಕೂಲವಾಗಿದೆ. ಇದು ತಾಲ್ಲೂಕು ಕೇಂದ್ರವಾಗಿದೆ. ೧೮೬೪ ರಲ್ಲಿ ಬೌರಿಂಗ್‌ನ ಕಾಲದಲ್ಲೇ ಮದರಾಸು – ಬೆಂಗಳೂರಿಗೆ ಬಂಗಾರಪೇಟೆಯ ಮೂಲಕ ಓಡಾಡಲು ಬ್ರಾಡ್‌ಗೇಜ್ ರೈಲು ಮಾರ್ಗ ಸಂಚಾರಕ್ಕೆ ತೆರೆಯಲಾಗಿತ್ತು ಎಂಬುದನ್ನು ನೆನಪು ಮಾಡಿಕೊಳ್ಳಬೇಕಾಗಿದೆ.

ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟ ಜಿಲ್ಲೆಯ ಜನ – ಬಂಗಾರಪೇಟೆಯೂ ಸೇರಿದಂತೆ ಆಯಾ ಸಂದರ್ಭದಲ್ಲಿ ಈ ರೀತಿಯಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡರು.

೧೯೨೪ ಡಿಸೆಂಬರ್ ೨೬ ರಂದು ಬೆಳಗಾವಿಯಲ್ಲಿ ಕಾಂಗ್ರೆಸ್‌ನ ೩೯ನೇ ಅಧಿವೇಶನ ನಡೆಯಿತು. ಎರಡು ದಿನಗಳ ಕಾಲ ಭವ್ಯವಾಗಿ ನಡೆದ ಈ ಅಧಿವೇಶನಕ್ಕೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಹಾತ್ಮ ಗಾಂಧೀಜಿಯವರೇ ಅಧ್ಯಕ್ಷರಾಗಿದ್ದರು. ಅಂದು ನಡೆದ ಅಧಿವೇಶನದಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಂದ ಸಾವಿರಾರು ಜನರು ಪಾಲ್ಗೊಂಡಿದ್ದರು. ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದಲೂ ಅನೇಕರು ಅಧಿವೇಶನಕ್ಕೆ ಹೋಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಒಮ್ಮೆ ಮಾತ್ರ ನಡೆದ ಈ ಅಧಿವೇಶನವು ಅತ್ಯಂತ ಮಹತ್ವದ್ದಾಗಿ ದಾಖಲಾಗಿದೆ.

ಇಂದು ಬಿಳಕವಾಡಿ ಎಂದು ಕರೆಯುವ ಸ್ಥಳದಲ್ಲಿ ನಡೆದ ಅಧಿವೇಶನಕ್ಕೆ ಗಂಗಾಧರ ದೇಶಪಾಂಡೆ ಸ್ವಾಗತಾಧ್ಯಕ್ಷರು. ೮೫ ಎಕರೆಯ ಪ್ರದೇಶವನ್ನು ಸಮತಟ್ಟು ಮಾಡಿದ ಈ ಸ್ಥಳವನ್ನು ವಿಜಯನಗರ ಎಂದು ಕರೆಯಲಾಗಿತ್ತು. ಭವ್ಯವಾಗಿ ಅಲಂಕಾರಗೊಂಡಿದ್ದ ದ್ವಾರವನ್ನು ವಿಜಯನಗರದ ವಿರೂಪಾಕ್ಷ ದ್ವಾರದಂತೆ ವಿನ್ಯಾಸಗೊಳಿಸಲಾಗಿತ್ತು. ಕುಡಿಯುವ ನೀರಿನ ವ್ಯವಸ್ಥೆಗೆ ದೊಡ್ಡ ಬಾವಿಯನ್ನು ತೋಡಲಾಗಿತ್ತು. ಅದಕ್ಕೆ ಪಂಪಾ ಸರೋವರ ಎಂದು ಹೆಸರಿಡಲಾಯಿತು. ಈಗ ಅದು ಕಾಂಗ್ರೆಸ್ ಬಾವಿ ಎಂದು ಜನಪ್ರಿಯವಾಗಿದೆ.

ಸಭಾ ಮಂಟಪದ ಸುತ್ತ, ದೇಶದ ವಿವಿಧ ಪ್ರಾಂತಗಳಿಂದ ಆಗಮಿಸಿದ್ದ ಪ್ರತಿನಿಧಿಗಳಿಗೆ ಸಾಲು – ಸಾಲು ಗುಡಾರಗಳನ್ನು ನಿರ್ಮಿಸಲಾಗಿತ್ತು. ಊಟದ ವ್ಯವಸ್ಥೆ, ಸ್ವಚ್ಛತೆ, ಜನರ ನೂಕು ನುಗ್ಗಲನ್ನು ನಿಯಂತ್ರಿಸಲು ಸ್ಥಳೀಯರೇ ಟೊಂಕಕಟ್ಟಿ ನಿಂತಿದ್ದರು. ಸಮವಸ್ತ್ರದ ಸ್ವಯಂಸೇವಕರು ತಂಡ ತಂಡವಾಗಿ ಓಡಾಡುತ್ತಿದ್ದರು. ಪರಿಸರದ ಸಂಪರ್ಕವನ್ನು ಗಂಗಾಧರರಾವ್, ಡಾ॥ ಹರ್ಡೀಕರ್, ಅವರು ಕುದುರೆಯ ಮೇಲೆ ಗಸ್ತು ತಿರುಗುತ್ತಾ ಗಮನಿಸುತ್ತಿದ್ದರು.

ಈ ವ್ಯವಸ್ಥೆಯನ್ನು ಕಂಡ ಗಾಂಧೀಜಿಯವರು ಮುಕ್ತ ಕಂಠದಿಂದ ಹೊಗಳಿದ್ದರು. ಬೆಳಗಾವಿಯ ಅಧಿವೇಶನದಲ್ಲಿ ಅಸಹಕಾರ ಬೀಜ ಮಂತ್ರವನ್ನು ಗಾಂಧೀಜಿಯವರು ಬಿತ್ತಿದರು ಮತ್ತು ಎಲ್ಲೂ ಹಿಂಸೆ ನಡೆಯಬಾರದೆಂಬ ದೃಢಮನೋಭಾವವನ್ನು ವ್ಯಕ್ತಪಡಿಸಿದ್ದು ಬೆಳಗಾವಿಯಲ್ಲೇ!

ಪತ್ರಿಕೆಗಳಲ್ಲಿ ಓದಿದ್ದ ಹೆಸರು ಕೇಳಿದ್ದ ಅನೇಕ ನಾಯಕರ ಭಾಷಣಗಳನ್ನು ಪ್ರತ್ಯಕ್ಷ ಕೇಳುವ ಅವಕಾಶ ಉಂಟಾದುದು ಈ ಅಧಿವೇಶನದಲ್ಲಿ. ಬ್ರಿಟಿಷರ ವಿರುದ್ಧ ಗಾಂಧೀಜಿಯವರು ಬಿತ್ತಿದ ಅಸಹಕಾರ ಬೀಜ ಮೊಳಕೆಯೊಡೆದುದು ಇಲ್ಲಿ ನಡೆದ ಅಧಿವೇಶನದಲ್ಲೇ! ಎಲ್ಲ ಕಡೆಯೂ ಅಸಹಕಾರದ ಸಸಿಗಳು ಹಂಚಿ ವಿತರಣೆಯಾದುದು ಇಲ್ಲಿಂದಲೇ! ಎಲ್ಲ ಕಡೆಯೂ ಆದ ಹಾಗೆ ಇದರ ಪರಿಣಾಮ ಸಂಸ್ಥಾನದಲ್ಲಿ ಕೋಲಾರ ಜಿಲ್ಲೆಯಲ್ಲಿ ಕಾಣುತ್ತಾ ಬಂತು!

## ಜಿಲ್ಲೆಯಲ್ಲಿ ಗಾಂಧೀಜಿ

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಬಂಗಾರಪೇಟೆಯ ಕೊಡುಗೆಯನ್ನು ಸುವರ್ಣಾಕ್ಷರಗಳಲ್ಲಿ ದಾಖಲು ಮಾಡಬೇಕಾಗಿದೆ. ಯಾವ ಅಮೃತಘಳಿಗೆಯಲ್ಲಿ



ಗಾಂಧೀಜಿಯವರು ಬಂಗಾರಪೇಟೆಯ ರೈಲ್ವೇ ನಿಲ್ದಾಣದಲ್ಲಿ ತನ್ನ ಪಾದಸ್ಪರ್ಶ ಮಾಡಿದರೋ ಆಗಿನಿಂದಲೇ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ತನುಮನಧನಗಳನ್ನು ಅರ್ಪಿಸಲು ಅನೇಕರು ಸಿದ್ಧರಾದರು. ಬಡವರು, ಶ್ರೀಮಂತರು ಎನ್ನುವ ವ್ಯತ್ಯಾಸವಿಲ್ಲದೆ, ವಿದ್ಯಾವಂತರು – ಅವಿದ್ಯಾವಂತರು ಎಂಬ ಭೇದ ಭಾವವಿಲ್ಲದೆ, ಜಾತಿ ಧರ್ಮದ ಕಟ್ಟು ಪಾಡುಗಳಿಲ್ಲದೆ ಎಲ್ಲರ ಮನದಲ್ಲೂ ಒಂದೇ ಮಂತ್ರದ ಪಠನ ಪ್ರಾರಂಭವಾಯಿತು. ಅದೇ ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸುತ್ತಿದ್ದ ಸ್ವಾತಂತ್ರ್ಯವನ್ನು ಗಳಿಸುವ ಮಹಾಮಂತ್ರ!

೧೯೨೭ ರಲ್ಲಿ ಗಾಂಧೀಜಿಯವರು ಖಾದಿಯನ್ನು ಕುರಿತು ಪ್ರಚಾರ ಮಾಡಲು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದರು. ಮಧ್ಯದಲ್ಲಿ ಲಘುವಾದ ಪಾರ್ಶ್ವವಾಯುವಿಗೆ ತುತ್ತಾದರು. ವಿಶ್ರಾಂತಿ ಪಡೆಯಲು ಬೆಳಗಾವಿಯ ಅಂಬೋಲಿ ಗಿರಿಧಾಮಕ್ಕೆ ಹೋದರು. ಆದರೆ ಅಲ್ಲಿನ ಹವಾಮಾನ ಗಾಂಧೀಜಿಯವರಿಗೆ ಸರಿ ಹೊಂದಲಿಲ್ಲ. ಆಗ ಜಿಲ್ಲೆಯ ನಂದಿ ಗಿರಿಧಾಮಕ್ಕೆ ಗಾಂಧೀಜಿಯವರು ಬಂದು ೪೫ ದಿನಗಳ ಕಾಲ ಸಂಸ್ಥಾನದ ಅತಿಥಿಗಳಾಗಿ ಉಳಿದುಕೊಂಡಿದ್ದರು. ಅಲ್ಲಿನ ಎಲ್ಲ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಸಿ.ರಾಜಗೋಪಾಲಾಚಾರಿಯವರು ಮುಂದಾಗಿ ಆಗಮಿಸಿದ್ದರು. ದೇಶದ ವಿವಿಧ ಸ್ಥಳಗಳಿಂದ ಗಾಂಧೀಜಿಯವರನ್ನು ಭೇಟಿ ಮಾಡಲು ರಾಷ್ಟ್ರ ನಾಯಕರು ಆಗಮಿಸಿದ್ದರು.

ಈಗಾಗಲೇ ಜಿಲ್ಲೆಯ ರಾಜಕೀಯ ರಂಗದಲ್ಲಿ ಸಕ್ರಿಯರಾಗಿದ್ದ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ, ಟಿ.ರಾಮಾಚಾರ್, ಕೆ.ಸಂಪಂಗಿರಾಮಯ್ಯ, ಎನ್.ಸಿ.ತಿಮ್ಮಾರೆಡ್ಡಿ, ಎನ್.ಸಿ.ನಾಗಯ್ಯ ರೆಡ್ಡಿ ಮುಂತಾದವರು ಗಾಂಧೀಜಿಯವರನ್ನು ಭೇಟಿ ಮಾಡಿದರು.

ನಂದಿ ಗಿರಿಧಾಮದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿ ಬಂದ ನಂತರ ಕೆ.ಸಿ.ರೆಡ್ಡಿಯವರು ಅವರಿಂದ ತುಂಬಾ ಪ್ರಭಾವಿತರಾದರು. ದೇಶ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಸಿದ್ಧರಾದರು. ಆದರೆ ದೇಶೀಯ ಅರಸರ ಸಂಸ್ಥಾನಗಳಲ್ಲಿ ಬ್ರಿಟಿಷ್ ಪ್ರಾಂತ್ಯದಲ್ಲಿನ ಸ್ವಾತಂತ್ರ್ಯ ಆಂದೋಲನ ಚಳುವಳಿಗೆ ಬದಲಾಗಿ ಗ್ರಾಮಗಳ ನೈರ್ಮಲ್ಯ, ಹರಿಜನೋದ್ಧಾರಕ್ಕಾಗಿ

ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಗಾಂಧೀಜಿಯವರು ಸಲಹೆ ನೀಡಿದರು.

## ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿ

ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿಯ ರೈತ ಕುಟುಂಬದಲ್ಲಿ ೧೯೦೨ ಚಂಗಲರಾಯರೆಡ್ಡಿಯವರು ಜನಿಸಿದರು. ಕೋಲಾರ ಚಿನ್ನದ ಗಣಿಯಲ್ಲಿ ಬ್ರಿಟಿಷರು ಪ್ರಾರಂಭಿಸಿದ್ದ ಆಂಗ್ಲ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದುಕೊಂಡು, ಬೆಂಗಳೂರಿನ ಲಂಡನ್ ಮಿಷನ್ ಶಾಲೆಯಲ್ಲಿ ಪ್ರೌಢಶಿಕ್ಷಣವನ್ನು ಪೂರೈಸಿದರು. ಮದರಾಸಿನಲ್ಲಿ ಬಿ.ಎ., ಬಿ.ಎಲ್. ಪದವಿ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗಲೇ ಮಹಾತ್ಮಗಾಂಧಿ, ಅನಿಬೆಸೆಂಟ್‌ರಂತಹ ರಾಷ್ಟ್ರನಾಯಕರ ವೈಚಾರಿಕ ಭಾಷಣಗಳಿಂದ ಪ್ರೇರಿತರಾಗಿದ್ದರು. ವಿದ್ಯಾಭ್ಯಾಸದ ನಂತರ ಕೋಲಾರದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭ ಮಾಡಿದರು. ಜೊತೆ ಜೊತೆಯಲ್ಲಿ ಸಮಾಜಸೇವೆಗೂ ಮುಂದಾದರು.

## ಪ್ರಜಾಮಿತ್ರ ಮಂಡಳಿ / ಪ್ರಜಾ ಪಕ್ಷ

ವಿದ್ಯಾರ್ಥಿಯಾಗಿದ್ದಾಗಲೇ ಗಾಂಧೀಜಿಯವರ ಭಾಷಣಗಳು ಅವರ ವೈಚಾರಿತೆಯನ್ನು ಅಧ್ಯಯನ ಮಾಡಿದ್ದ ಕೆ.ಸಿ.ರೆಡ್ಡಿ ಗಾಂಧೀಜಿಯವರನ್ನು ನಂದಿಬೆಟ್ಟದಲ್ಲಿ ಸ್ವತಃ ಭೇಟಿ ಮಾಡಿ ಅವರೊಡನೆ ಮಾತನಾಡುವ ಅವಕಾಶವನ್ನು ಪಡೆದುಕೊಂಡದ್ದು ಅವರ ಜೀವನದ ಒಂದು ಅತ್ಯಮೂಲ್ಯ ಘಳಿಗೆಯಾಯಿತು.

ಗಾಂಧೀಜಿಯವರು ವಿಶ್ರಾಂತಿಯ ನಂತರ ನಂದಿಬೆಟ್ಟದಿಂದ ಹೊರಟರು. ಅಲ್ಲಿಂದ ಕೆ.ಸಿ.ರೆಡ್ಡಿಯವರು ಕೋಲಾರಕ್ಕೆ ಹಿಂದಿರುಗಿ ಸಾರ್ವಜನಿಕ ಸೇವೆ, ದಲಿತೋದ್ಧಾರಕ್ಕಾಗಿ ವೇದಿಕೆಯನ್ನು ಹುಡುಕುತ್ತಿದ್ದರು. ಬ್ರಾಹ್ಮಣೇತರ ಪಕ್ಷವೆಂದು ಪ್ರಚಲಿತವಾಗಿದ್ದ ಪ್ರಜಾಮಿತ್ರ ಮಂಡಳಿಯನ್ನು ಸೇರಿದರು. ಸ್ವಲ್ಪ ಕಾಲ ಅಲ್ಲಿದ್ದ ರೆಡ್ಡಿಯವರಿಗೆ ಅಲ್ಲಿ ಹೊಂದಾಣಿಕೆಯಾಗಲಿಲ್ಲ. ಎಚ್.ಸಿ.ದಾಸಪ್ಪ, ವಿ.ವೆಂಕಟಪ್ಪ, ಎಚ್.ಬಿ.ಗುಂಡಪ್ಪಗೌಡ, ವಿ.ವೆಂಕಟಪ್ಪ, ಬಿ.ಎನ್.ಗುಪ್ತ, ಡಿ.ಎಸ್. ಮಲ್ಲಪ್ಪ ಮುಂತಾದವರೊಂದಿಗೆ ಪ್ರಜಾಮಿತ್ರ ಮಂಡಳಿ ಪಕ್ಷದಿಂದ ಹೊರ ಬಂದರು.



೧೯೩೦ ರಲ್ಲಿ ಅವರ ಜೊತೆಗಾರರಾದ ಎಚ್.ಬಿ.ಗುಂಡಪ್ಪಗೌಡ, ಎಸ್.ಸಿ.ಮಲ್ಲಪ್ಪ, ವಿ.ವೆಂಕಟಪ್ಪ, ಡಿ.ಎಚ್.ಚಂದ್ರಶೇಖರಯ್ಯ, ಬಿ.ಎನ್.ಗುಪ್ತ, ರಾವ್ ಸಾಹೇಬ್ ಚೆನ್ನಯ್ಯ, ಶಿವಮೊಗ್ಗದ ಸಿದ್ದಯ್ಯ, ಬಾಗೇಮನೆ ದೇವೇಗೌಡ, ಎಚ್. ಸಿದ್ದಯ್ಯ ಮುಂತಾದ ಪ್ರಮುಖರೊಡನೆ 'ಪ್ರಜಾಪಕ್ಷ' ಎಂಬ ಹೊಸ ಸಂಘಟನೆಯನ್ನು ಸ್ಥಾಪಿಸಿದರು. ಈ ಪಕ್ಷದ ೫ನೆಯ ಸಭೆಯನ್ನು ಕೋಲಾರದಲ್ಲಿ ಏರ್ಪಡಿಸಿದ್ದರು. ಮೊದಲಿನಿಂದ ಮೇಲ್ವರ್ಗದವರ ಶೋಷಣೆಗೆ ಒಳಗಾಗಿದ್ದ, ಅಧಿಕಾರದಿಂದ ವಂಚಿತರಾಗಿದ್ದ ಹಾಗೂ ಸಮಾಜದಲ್ಲಿ ಸ್ಥಾನಮಾನವನ್ನು ಪಡೆದುಕೊಳ್ಳಲು ಹೋರಾಡುವ ಪಕ್ಷ ಇದಾಯಿತು.

ಅದೇ ವರ್ಷ ರೆಡ್ಡಿ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯ ವಿಧಾಯಕ ಸಭೆಗಳೆರಡರಿಂದಲೂ ಏಕ ಕಾಲಕ್ಕೆ ಆಯ್ಕೆಗೊಂಡರು. ೧೯೩೦ ರಿಂದ ೧೯೩೭ರ ವರೆಗೆ ನಿರಂತರವಾಗಿ ಬಂಗಾರಪೇಟೆ ಕ್ಷೇತ್ರದಿಂದ ಎರಡು ಸದನಗಳಿಗೂ ಸದಸ್ಯರಾಗಿದ್ದರು. ಕೋಲಾರ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ೧೯೩೩ ರಿಂದ ೧೯೩೬ ರ ವರೆಗೂ ಇಲ್ಲಿ ಸೇವೆ ಸಲ್ಲಿಸಿದರು. ಆ ವೇಳೆಗಾಗಲೇ ಪ್ರಜಾಪಕ್ಷದ ವಿಚಾರಗಳನ್ನು ಪ್ರತಿಪಾದಿಸಲು ೧೯೩೧ ರಲ್ಲಿ ಪ್ರಜಾಮತ ಹಾಗೂ ೧೯೩೪ ರಲ್ಲಿ ಜನವಾಣಿ ಪತ್ರಿಕೆಗಳು ಮದರಾಸಿನಿಂದ ಹೊರಡುವಂತೆ ಆರಂಭಿಸಲಾಗಿತ್ತು. ದಿವಾನ ಮಿರ್ಜಾ ಇಸ್ಮಾಯಿಲ್‌ರ ಅನುಮತಿ ಪಡೆದು ಅವನ್ನು ಬೆಂಗಳೂರಿಗೆ ವರ್ಗಾಯಿಸಿದರು. ಆಗಲೇ ರೆಡ್ಡಿಯವರು ಜನವಾಣಿ ಪತ್ರಿಕೆಯ ಸಂಪಾದಕರಾದರು. ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಈ ಪತ್ರಿಕೆಗಳು ಸರ್ಕಾರದ ಕೆಂಗಣ್ಣಿಗೆ ಗುರಿಯಾದವು.

ಸರ್ಕಾರದೊಡನೆ ಸಮರ್ಥವಾಗಿ ಸೆಣಸಬೇಕಾದರೆ ತಳಹದಿ ಭದ್ರವಾಗಿರಬೇಕು ಎಂಬ ಆಶಯದೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ರೈತ ಸಂಘಟನೆಗೆ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಪ್ರಜಾಪಕ್ಷ ಮುಂದಾಯಿತು. ೧೯೩೩ ರಲ್ಲಿ ಜಿಲ್ಲಾ ರೈತ ಸಮ್ಮೇಳನ ಚಿತ್ರದುರ್ಗದಲ್ಲಿ ನಡೆಯಿತು. ಅದರ ಅಧ್ಯಕ್ಷತೆಯನ್ನು ರೆಡ್ಡಿ ವಹಿಸಿದ್ದರು. ಅದೇ ವರ್ಷ ಕೋಲಾರದಲ್ಲಿ ಕೋಲಾರ ಜಿಲ್ಲಾ ರೈತ ಸಮ್ಮೇಳನ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಎಲ್ಲದರ ಬೆಳವಣಿಗೆಯ

ಹಿನ್ನೆಲೆಯಲ್ಲಿ ಸ್ಥಳೀಯ ಚುನಾವಣೆಗಳಲ್ಲಿ ಸ್ಪರ್ಧಿಸಿ ಪ್ರಜಾಪಕ್ಷವು ವಿಜಯಿಯಾಯಿತು. ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು ಹಾಗೂ ಕೋಲಾರ ಸೇರಿದಂತೆ ಅನೇಕ ಜಿಲ್ಲಾ ಬೋರ್ಡ್‌ಗಳಲ್ಲಿ ಅಧಿಕಾರವನ್ನು ಪಡೆದುಕೊಂಡಿತು. ಕೋಲಾರ ಜಿಲ್ಲಾ ಬೋರ್ಡ್‌ಗೆ ರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಈ ಪಕ್ಷಕ್ಕೆ ಗ್ರಾಮೀಣ ಬೆಂಬಲವಿದ್ದ ಹಿನ್ನೆಲೆಯಲ್ಲಿ ರಾಜಕೀಯವಾಗಿ ಅದರ ಪ್ರಾಮುಖ್ಯತೆ ದಿನದಿಂದ ದಿನಕ್ಕೆ ಸಂಸ್ಥಾನದಲ್ಲಿ ಹೆಚ್ಚಾಯಿತು. ಇದನ್ನು ಕಾಂಗ್ರೆಸ್ ಸಹಿಸಿಕೊಳ್ಳದಾಯಿತು.

೧೯೩೦ ರ ಉಪ್ಪಿನ ಸತ್ಯಾಗ್ರಹದ ಬಿರುಗಾಳಿ ದೇಶದುದ್ದಗಲಕ್ಕೂ ವ್ಯಾಪಿಸಿತು. ಬ್ರಿಟಿಷ್ ಆಡಳಿತ ಪ್ರಾಂತ್ಯಗಳಲ್ಲಿ ಮಾರ್ದನಿಸಿತು. ಆದರೆ ಕೋಲಾರ ಜಿಲ್ಲೆಯೂ ಸೇರಿದಂತೆ ಸಂಸ್ಥಾನದಲ್ಲಿ ಇದರ ಪ್ರಭಾವ ಅಷ್ಟಾಗಿ ಕಂಡುಬರುವುದಿಲ್ಲ.

**ಅಸಹಕಾರ ಚಳುವಳಿ**

೧೯೩೨ ಜನವರಿ ೪ ರಂದು ಮುಂಬಯಿ ನಗರದಲ್ಲಿ ಗಾಂಧೀಜಿಯವರನ್ನು ಬಂಧಿಸಲಾಯಿತು. ಆಗ ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ, ರಾಬರ್ಟ್‌ಸನ್ ಪೇಟೆ ಹಾಗೂ ಬಂಗಾರಪೇಟೆ ಪಟ್ಟಣಗಳಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು. ಜಿಲ್ಲೆಯ ಎಲ್ಲ ಪಟ್ಟಣಗಳಲ್ಲೂ ಗಾಂಧೀಜಿ ಹಾಗೂ ಭಗತ್ ಸಿಂಗ್‌ರ ಚಿತ್ರವಿದ್ದ ದೇಶೀಯ ಟವಲ್‌ಗಳನ್ನು ವಿತರಣೆ ಮಾಡಿದ್ದಲ್ಲದೆ ದೇಶೀಯ ವಸ್ತ್ರಗಳನ್ನು ಮಾರುವಂತೆ ಸ್ಥಳೀಯ ವರ್ತಕರಿಗೆ ಒತ್ತಾಯ ಹೇರಲಾಯಿತು.

ಆದರೆ ಇನ್ನೊಂದು ಮಹತ್ತರ ಘಟನೆಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಅದೆಂದರೆ, ಭಾರತಕ್ಕೆ ಸ್ವಾತಂತ್ರ್ಯ ಬಂದುದು ೧೯೪೭, ಆಗಸ್ಟ್ ೧೫ ರಂದು. ಆದರೆ ಕೋಲಾರದ ವಿವಿಧ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ೧೯೩೨, ಜನವರಿ ೨೬ ರಂದು ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿ ಅಂದೇ ಸ್ವಾತಂತ್ರ್ಯ ದಿನವನ್ನು ಆಚರಿಸಿದರು.

ಫೆಬ್ರವರಿ ತಿಂಗಳಲ್ಲಿ ಬಂಗಾರಪೇಟೆಯ ಪುರಸಭಾ ಪ್ರೌಢಶಾಲೆ ಮತ್ತು ಆಂಗ್ಲ ವರ್ನಾಕ್ಯುಲರ್ ಹೈಸ್ಕೂಲಿನ ವಿದ್ಯಾರ್ಥಿಗಳು ತರಗತಿಗಳನ್ನು ತ್ಯಜಿಸಿ



ಬ್ರಿಟಿಷ್ ಸಾಮ್ರಾಜ್ಯದ ಧೋರಣೆಯ ವಿರುದ್ಧ ಘೋಷಣೆ ಕೂಗಿಕೊಂಡು ಪಟ್ಟಣದಲ್ಲಿ ಮೆರವಣಿಗೆ ನಡೆಸಿದರೆಂಬುದು ಉಲ್ಲೇಖಾರ್ಹ ಘಟನೆಯಾಗಿದೆ.

ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ಸ್ವದೇಶಿ ಲೀಗ್‌ನವರು ಮುದ್ರಿಸಿದ್ದ ಕರಪತ್ರವನ್ನು ಬಂಗಾರಪೇಟೆಯಲ್ಲಿ ವಿತರಿಸಲಾಯಿತು. ವಿದೇಶಿ ಸಕ್ಕರೆಗೆ ಬದಲು ದೇಶೀಯ ಸಕ್ಕರೆಯನ್ನು ಮಾರಾಟ ಮಾಡಲು ವರ್ತಕರನ್ನು ಒತ್ತಾಯಿಸಲಾಯಿತು. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಉಪಯೋಗಕ್ಕೆ ಕರೆ ನೀಡಿದ್ದು ಇದೇ ಸಂದರ್ಭದಲ್ಲಿ!

**ಗಾಂಧೀಜಿ – ನಂದಿ ಗಿರಿಧಾಮ – ಕೋಲಾರದಲ್ಲಿ ಪ್ರವಾಸ**

೧೯೩೬ ರಲ್ಲಿ ಹರಿಜನರ ಉದ್ಧಾರ ನಿಧಿಯನ್ನು ಸಂಗ್ರಹಿಸಲು ಗಾಂಧೀಜಿಯವರು ದಕ್ಷಿಣ ಭಾರತದ ಪ್ರವಾಸ ಕೈಗೊಂಡರು. ಆಗ ಅವರ ಆರೋಗ್ಯದಲ್ಲಿ ಸ್ವಲ್ಪ ತೊಂದರೆ ಉಂಟಾಯಿತು. ಅಧಿಕ ರಕ್ತದ ಒತ್ತಡದಿಂದ ಬಳಲುತ್ತಿದ್ದುದರಿಂದ ಅವರಿಗೆ ವಿಶ್ರಾಂತಿ ಬೇಕಾಯಿತು. ಅದಕ್ಕಾಗಿ ಬೆಂಗಳೂರು ಮಾರ್ಗವಾಗಿ ನಂದಿ ಗಿರಿಧಾಮಕ್ಕೆ ಬಂದು ಕಾಲ್ನಡಿಗೆಯಲ್ಲೇ ಬೆಟ್ಟವನ್ನು ಹತ್ತಿದರು.

ಹಲವು ಕಾಲ ನಂದಿಬೆಟ್ಟದಲ್ಲಿ ಗಾಂಧೀಜಿಯವರು ತಂಗಿದ್ದರು. ಅದೇ ಸಮಯದಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದಲ್ಲಿ ಕೆ.ಸಿ.ರೆಡ್ಡಿಯವರ ಪ್ರಜಾ ಸಂಯುಕ್ತ ಪಕ್ಷ ವಿಲೀನವಾಗುವ ಸಂಬಂಧ ವಿವರವಾಗಿ ಚರ್ಚೆಗಳನ್ನು ನಡೆಸಿದರು, ಬಿ.ಎನ್.ಗುಪ್ತ, ಟಿ.ಸಿದ್ದಲಿಂಗಯ್ಯ, ವೆಂಕಟಪತಯ್ಯ ಮತ್ತು ಕೆ.ಸಿ.ರೆಡ್ಡಿಯವರು ಗಾಂಧೀಜಿಯವರನ್ನು ಭೇಟಿಯಾಗಿ ಪ್ರಜಾ ಸಂಯುಕ್ತ ಪಕ್ಷವು ಕಾಂಗ್ರೆಸ್‌ನಲ್ಲಿ ವಿಲೀನಗೊಂಡ ನಂತರ ಕಾಂಗ್ರೆಸ್ಸಿನಲ್ಲಿ ಪ್ರಜಾ ಸಂಯುಕ್ತ ಪಕ್ಷದ ಸದಸ್ಯರ ಸ್ಥಾನಮಾನವೇನು ಎಂಬ ಆತಂಕ ನಮ್ಮ ಸದಸ್ಯರಲ್ಲಿದೆ ಎಂಬ ಅಂಶವನ್ನು ಅವರ ಗಮನಕ್ಕೆ ತಂದರು. ಆಗ ನಗುತ್ತಾ ಗಾಂಧೀಜಿಯವರು ಕಾಂಗ್ರೆಸ್ಸಿನಲ್ಲಿ ಎಲ್ಲರನ್ನೂ ತಮ್ಮ ಅಣ್ಣ ತಮ್ಮಂದಿರಂತೆ ಪಕ್ಷಕ್ಕೆ ಕರೆದುಕೊಳ್ಳುವ ಮನೋಭಾವವಿದೆ, ಎಂದು ಉತ್ತರಿಸಿದರಂತೆ. ಸುದೀರ್ಘ ಚರ್ಚೆಯ ನಂತರ, ಪ್ರಜಾ ಸಂಯುಕ್ತ ಪಕ್ಷವು ೧೯೩೭ ಅಕ್ಟೋಬರ್ ೧೬ ರಂದು ಮೈಸೂರು ಕಾಂಗ್ರೆಸ್ ಪಕ್ಷದಲ್ಲಿ

ವಿಲೀನಗೊಂಡಿತು. ಆ ಸಂದರ್ಭದಲ್ಲಿ ಗಾಂಧೀಜಿಯವರನ್ನು ಜಿಲ್ಲೆಗೆ ಕರೆದುಕೊಂಡು ಬರಬೇಕೆಂಬ ಹೆಬ್ಬಯಕೆ ಉಂಟಾಯಿತು.

ಕೆ.ಸಿ.ರೆಡ್ಡಿಯವರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವಂತೆ ಗಾಂಧೀಜಿಯವರನ್ನು ವಿನಂತಿಸಿಕೊಂಡರು. ಅದಕ್ಕೆ ಒಪ್ಪಿದ ಗಾಂಧೀಜಿಯವರು ೧೯೩೬ ರ ಮೇ ತಿಂಗಳ ೩೧ನೇ ದಿನಾಂಕದಂದು ನಂದಿಬೆಟ್ಟದ ಮೇಲೆ ಸೇರಿದ್ದ ಜನರಿಂದ ಬೀಳ್ಕೊಂಡು ತಮ್ಮ ಸಂಗಡಿಗರೊಂದಿಗೆ ಕಾಲ್ನಡಿಗೆಯಲ್ಲೇ ಬೆಟ್ಟದಿಂದ ಕೆಳಗೆ ಇಳಿದರು. ಸುಲ್ತಾನಪೇಟೆಯಲ್ಲಿ ಕಾರಿನಲ್ಲಿ ಚಿಕ್ಕಬಳ್ಳಾಪುರ ಶಿಡ್ಲಘಟ್ಟ ನಂತರ ಚಿಂತಾಮಣಿಗೆ ಬಂದರು. ಅಲ್ಲಿ ಅಭಿನಂದನಾ ಪತ್ರವನ್ನು ಸ್ವೀಕರಿಸಿದರು ಮತ್ತು ಹರಿಜನ ಕಲ್ಯಾಣಕ್ಕಾಗಿ ನೀಡಿದ ದೇಣಿಗೆಯನ್ನು ಒಪ್ಪಿಸಿಕೊಂಡರು.

ರೆಡ್ಡಿಯವರ ಕೋರಿಕೆಯ ಮೇರೆಗೆ ಕೋಲಾರಕ್ಕೆ ಆಗಮಿಸಿದ ಗಾಂಧೀಜಿಯವರನ್ನು ಜಿಲ್ಲಾಧಿಕಾರಿಗಳು, ಗೌರವಾದರಗಳೊಂದಿಗೆ ಸ್ವಾಗತಿಸಿದರು. ದಾರಿಯುದ್ದಕ್ಕೂ ಗ್ರಾಮಗಳ ಬಳಿ ತಳಿರು ತೋರಣಗಳಿಂದ ಅಲಂಕಾರ ಮಾಡಿದ್ದ ಗ್ರಾಮಸ್ಥರು ಗಾಂಧೀಜಿಯವರಿಗೆ ಮಾಲಾರ್ಪಣೆ ಮಾಡಿ ದೇಣಿಗೆ ಸಮರ್ಪಿಸಿದರು. ಕೋಲಾರಕ್ಕೆ ಬಂದಾಗ ಗಾಂಧೀಜಿಯವರು ಉಳಿದುಕೊಂಡಿದ್ದುದು ಪಟ್ಟಣದ ಗೌರಿಪೇಟೆಯ ಈಗಿನ ೫ನೆಯ ಕ್ರಾಸ್ ಮನೆಯಲ್ಲಿ. ಆಪಾರವಾದ ಗೌರವ ಭಕ್ತಿಯಿಂದ ಗಾಂಧೀಜಿಯವರ ಸೌಕರ್ಯಗಳನ್ನು ಕೋಲಾರ ಪ್ರತಿನಿಧಿಗಳು ನೋಡಿಕೊಂಡರು.

### ಬಂಗಾರಪೇಟೆಯಲ್ಲಿ ಬಾಪೂ

ನಂತರ ಬಾಪೂ ಪಾದಗಳು ಸ್ಪರ್ಶಿಸಿದ್ದು ಬಂಗಾರಪೇಟೆಯ ಸುವರ್ಣ ಭೂಮಿಯನ್ನು. ರಾಷ್ಟ್ರಪಿತರ ಪಾದಗಳ ಸ್ಪರ್ಶದಿಂದ ಪುಳಕಗೊಂಡ ಜಿಲ್ಲೆಯ ನೆಲದಲ್ಲಿ ಸ್ವಾತಂತ್ರ್ಯ ಚಳವಳಿಯ ಕಿಚ್ಚು ಹೊತ್ತಿಕೊಂಡಿತು. ಅಂತಹ ಅವಿಸ್ಮರಣೀಯ ಅಮೃತಘಳಿಗೆಯ ನೆನಪು ಜನಸಾಮಾನ್ಯರಲ್ಲಿ ಅಚ್ಚಳಿಯದೆ ಉಳಿದುಕೊಂಡಿತು.

ಕೋಲಾರದಿಂದ ಬಂಗಾರಪೇಟೆಗೆ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ವ್ಯವಸ್ಥೆ ಮಾಡಿದ್ದ ರೋಲ್ಸ್ ರಾಯ್ ಕಾರಿನಲ್ಲಿ ಆಗಮಿಸಿದ ಗಾಂಧೀಜಿಯವರು ಎಡ್ವರ್ಡ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ



ಸಭೆಯಲ್ಲಿ ಸುಮಾರು ೧೦ ನಿಮಿಷಗಳ ಕಾಲ ಹಿಂದಿಯಲ್ಲಿ ಮಾತನಾಡಿದರು. ಆಗ ಅವರ ಜೊತೆಯಲ್ಲಿ ಪತ್ನಿ ಕಸ್ತೂರಿಬಾ, ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ಸರೋಜಿನಿ ನಾಯ್ಡು ಇದ್ದು ಸಭೆಯಲ್ಲೂ ಪಾಲ್ಗೊಂಡರು.

### ಆದಿನಾರಾಯಣ ಶೆಟ್ಟಿ

ಬಂಗಾರಪೇಟೆಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಆದಿನಾರಾಯಣ ಶೆಟ್ಟಿ ಗಾಂಧೀಜಿಯವರನ್ನು ಭೇಟಿಯಾಗಿ ದಲಿತರ ಉದ್ಧಾರಕ್ಕಾಗಿ ಪಟ್ಟಣದ ನಿವಾಸಿಗಳು ರೂಪಿಸಿದ ಯೋಜನೆಗಳನ್ನು ತಿಳಿಸಿದರು. ಇಲ್ಲಿನ ಜನರ ಸಾಮಾಜಿಕ ಕಾಳಜಿಯನ್ನು ಗಾಂಧೀಜಿ ಮೆಚ್ಚಿಕೊಂಡರು. ಸಾರ್ವಜನಿಕ ಸಭೆಯ ನಂತರ ಶೆಟ್ಟರು ಗಾಂಧೀಜಿಯವರಿಗೆ ಬೆಳ್ಳಿ ಲೋಟದಲ್ಲಿ ನೀರನ್ನು ಕುಡಿಯಲು ಕೊಟ್ಟರು. ನೀರು ಕುಡಿದ ನಂತರ ಗಾಂಧೀಜಿಯವರು ಬೆಳ್ಳಿ ಲೋಟವನ್ನು ಹರಾಜು ಹಾಕಿ ಅದರಿಂದ ಬಂದ ಹಣವನ್ನು ಹರಿಜನ ಕಲ್ಯಾಣ ನಿಧಿಗೆ ಕೊಡುವಂತೆ ಹೇಳಿದರು.



**ಗಾಂಧೀಜಿ ಗಂಗಾ ಜಲ ಕುಡಿಯಲು ಬಳಸಿದ ಬೆಳ್ಳಿ ಲೋಟ**

ಆದರೆ ಆ ಲೋಟವನ್ನು ಹರಾಜು ಹಾಕದೆ ತಮ್ಮ ಬಳಿಯೇ ಸವಿ ನೆನಪಿಗಾಗಿ ಇಟ್ಟುಕೊಳ್ಳುವ ಮನವಿಯನ್ನು ಗಾಂಧೀಜಿಯವರಲ್ಲಿ ಮಾಡಿಕೊಂಡರು. ಶೆಟ್ಟರಿಗೆ ಸಂತೋಷದಿಂದ ಗಾಂಧೀಜಿಯವರು ಬೆಳ್ಳಿಲೋಟವನ್ನು ಹಿಂತಿರುಗಿಸಿದರಂತೆ.

ವರ್ತಕ ವೃತ್ತಿಯಲ್ಲಿದ್ದ ಆದಿನಾರಾಯಣ ಶೆಟ್ಟರು ಗಾಂಧೀಜಿ ವಿಚಾರಧಾರೆಯಿಂದ ಪ್ರಭಾವಿತರಾದರು. ವ್ಯಾಪಾರ ವಹಿವಾಟನ್ನು ಬಿಟ್ಟು ಕಾಂಗ್ರೆಸ್ ಸೇರಿದರು. ಬಂಧುಗಳು ಹಾಗೂ ಸ್ನೇಹಿತರ ವಿರೋಧವನ್ನೂ ಲೆಕ್ಕಿಸದೆ ಗಾಂಧೀಜಿಯವರ ಒಡನಾಟ ಬೆಳೆಸಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಯ ವಾಸ ಅನುಭವಿಸಿದರು. ಅವರ ಪುತ್ರ ವೆಂಕಟಾಚಲಪತಿಗೆ ಆಗ ೧೦ ವರ್ಷ, ತಂದೆಯ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು.

ಆದಿನಾರಾಯಣ ಶೆಟ್ಟಿ ನೇತೃತ್ವದಲ್ಲಿ ಸಂಗ್ರಹಿಸಿದ್ದ ಸಹಾಯಧನ ೨೮೫ ರೂಪಾಯಿಗಳನ್ನು ಹರಿಜನ ಉದ್ಧಾರಕ್ಕಾಗಿ ಇದ್ದ ನಿಧಿಗೆ ದೇಣಿಗೆ ನೀಡಿದರು. ಪಟ್ಟಣದ ದಲಿತರಿಗೆ ವಸತಿ ಸೌಕರ್ಯ ಕಲ್ಪಿಸಲು ೬೦೦ ರೂಪಾಯಿಗಳ ದೇಣಿಗೆ ಸಂಗ್ರಹಿಸಿಕೊಟ್ಟರು. ದಲಿತರಿಗೆ ಉಚಿತವಾಗಿ ನಿವೇಶನ ನೀಡಲಾಗಿತ್ತು. ಅಲ್ಲಿ ಬಾವಿ, ವಿದ್ಯುತ್, ದೀಪ, ರಸ್ತೆಯ ಕಾಮಗಾರಿ ನಡೆಯುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿ ಬಂಗಾರಪೇಟೆಗೆ ಭೇಟಿಕೊಟ್ಟಿದ್ದು ವಿಶೇಷವೆನ್ನಬಹುದು.

ಅಲ್ಲಿಂದ ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಹೊರಟರು. ಅಲ್ಲಿ ಗಣಿ ಕಾರ್ಮಿಕರು, ಕೂಲಿಯಾಳುಗಳು ವಾಸ ಮಾಡುತ್ತಿದ್ದ ವಸತಿ ಮನೆಗಳನ್ನು ನೋಡಿದರು. ಕಾರ್ಮಿಕರ ಬದುಕನ್ನು ಕಂಡು ಚಿಂತೆಗೊಳಗಾದರು.

ಗಣಿಯ ಆಡಳಿತ ವರ್ಗವನ್ನು ಸಂಪರ್ಕಿಸಿ ಅವರಲ್ಲಿ ವಿನಂತಿ ಮಾಡಿಕೊಂಡು–ಕಾರ್ಮಿಕ ಬದುಕಿನ ಕ್ರಮಕ್ಕೆ ಸುಧಾರಣೆ ಬೇಕೆಂದು ಬಯಸಿದರು. ಅಲ್ಲಿಂದ ಬೀಳ್ಕೊಂಡು ಮಾಲೂರು ಮಾರ್ಗವಾಗಿ ಬೆಂಗಳೂರನ್ನು ತಲುಪಿದರು.

ಕೋಲಾರ ಸೇರಿದಂತೆ ಸಂಸ್ಥಾನಕ್ಕೆ ಗಾಂಧೀಜಿಯವರ ಕೊನೆಯ ಭೇಟಿ ಇದಾಯಿತು.



## ಶಿವಪುರ ಧ್ವಜಾರೋಹಣ – ವಿದುರಾಶ್ವತ್ಥ ದುರಂತ

ಜಿಲ್ಲೆಯಲ್ಲಿ ವಿದುರಾಶ್ವತ್ಥದ ಐತಿಹಾಸಿಕ ದುರಂತ ಘಟನೆ ನಡೆದದ್ದು ೧೯೩೮ ರಲ್ಲಿ. ಇದಕ್ಕೆ ಹಿನ್ನೆಲೆಯಾಗಿ ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಶಿವಪುರದಲ್ಲಿ ನಡೆದ ಧ್ವಜಾರೋಹಣ ಸಭೆ ಸಮಾವೇಶವನ್ನು ನೆನಪು ಮಾಡಿಕೊಳ್ಳಬೇಕು. ಈ ಸಮಾವೇಶವು ಸಂಸ್ಥಾನದಲ್ಲಿ – ಕೋಲಾರ ಜಿಲ್ಲೆಯಲ್ಲಿಯೇ ಒಂದು ಸಶಕ್ತ ಸ್ವಾತಂತ್ರ್ಯ ಚಳವಳಿಗೆ ನಾಂದಿ ಹಾಡಿತೆಂದರೆ ತಪ್ಪಾಗಲಾರದು.

ಸಂಸ್ಥಾನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮಾದರಿಯಲ್ಲಿ ಮೈಸೂರು ಕಾಂಗ್ರೆಸ್ ಸಂಸ್ಥೆ ಎಂಬ ಹೊಸ ಸಂಘಟನೆಯು ೧೯೩೮ ಫೆಬ್ರವರಿ ೨೯ ರಂದು ಪ್ರಾರಂಭವಾಯಿತು. ಇದಕ್ಕೆ ಸಿದ್ದಲಿಂಗಯ್ಯ ಅಧ್ಯಕ್ಷರಾದರು. ಕೆ.ಸಿ.ರೆಡ್ಡಿಯವರು ಕಾರ್ಯದರ್ಶಿಗಳಾದರು.

ದೇಶದಲ್ಲೆಲ್ಲ ಧ್ವಜ ಸತ್ಯಾಗ್ರಹ ನಡೆಯುತ್ತಿದ್ದ ಸಂದರ್ಭ ಅದು. ಸ್ವಾತಂತ್ರ್ಯ ಚಳುವಳಿ ಉತ್ತುಂಗಕ್ಕೇರಿದ್ದ ಕಾಲ. ಆಗ ಸರ್ಕಾರದವರು ಧ್ವಜ ಸತ್ಯಾಗ್ರಹ ಅಂದ ತಕ್ಷಣ ಬಹಿರಂಗ ಸಭೆಗಳಿಗೆ ಪ್ರತಿಬಂಧಕಾಜ್ಞೆ ಹಾಕುತ್ತಿದ್ದರು. ಅಂದರೆ ಧ್ವಜ ಸತ್ಯಾಗ್ರಹಕ್ಕೆ ಸಂಬಂಧಪಟ್ಟ ಸಭೆ ನಡೆಯಬಾರದು, ಬಹಿರಂಗವಾಗಿ ರಾಷ್ಟ್ರ ಧ್ವಜವನ್ನು ಹಾರಿಸಬಾರದು, ಎಂಬ ಆಜ್ಞೆಯನ್ನು ಸರಕಾರದ ವತಿಯಿಂದ ಹೊರಡಿಸುತ್ತಿದ್ದರು. ಆಜ್ಞೆಯನ್ನು ಉಲ್ಲಂಘನೆ ಮಾಡಿದರೆ ದಸ್ತಗಿರಿ ಮಾಡುತ್ತಿದ್ದರು. ಆದರೆ ಸ್ವಾತಂತ್ರ್ಯ ಹೋರಾಟಗಾರರು ಇದ್ಯಾವುದನ್ನು ಲೆಕ್ಕಿಸುತ್ತಿರಲಿಲ್ಲ.

೧೯೩೮ ರಲ್ಲಿ ಅನೇಕ ಮುಖ್ಯ ಘಟನೆಗಳು ಜರುಗಿದವು. ಹರಿಪುರದಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ ಅಧಿವೇಶನ ಆಯಿತು. ಅಲ್ಲಿ ಒಂದು ವಿಶೇಷ ನಿರ್ಣಯ ಮಂಜೂರಾಯಿತು. ದೇಶೀಯ ಸಂಸ್ಥಾನಗಳಲ್ಲಿರುವ ಕಾಂಗ್ರೆಸ್ ಶಾಖೆಗಳು ಕೇವಲ ರಚನಾತ್ಮಕ ಕಾರ್ಯಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದು, ರಾಜಕೀಯ, ಆಶೋತ್ತರಗಳಿಗೆ ಬೇಕಾದರೆ ಅಲ್ಲಿನ ಪ್ರಜೆಗಳು ತಮ್ಮದೇ ಆದಂತಹ ಬೇರೆ ಸಂಸ್ಥೆಗಳನ್ನು ಕಟ್ಟಿಕೊಳ್ಳತಕ್ಕದ್ದು ಎಂದು ನಿರ್ಣಯಿಸಲಾಯಿತು. ಇದರಿಂದಾಗಿ ೧೯೩೮ ಫೆಬ್ರವರಿ ೨೮ ರಂದು ಶಿವರಾತ್ರಿಯ ದಿನ ಮೈಸೂರಿನಲ್ಲಿ

ವಕೀಲರಾಗಿದ್ದ ಲಕ್ಷ್ಮೀನಾರಾಯಣರ ಮನೆಯಲ್ಲಿ ಮೈಸೂರು ಕಾಂಗ್ರೆಸ್ ಅನ್ನು ಸ್ಥಾಪಿಸಿದರು. ಆಗ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಅಧಿವೇಶನವನ್ನು ಕರೆಯಲು ನಿರ್ಣಯಿಸಲಾಯಿತು. ಅಧಿವೇಶನದಲ್ಲಿ ಎರಡು ಘೋಷಣೆಗಳನ್ನು ಮಾಡುವ ಮುಖ್ಯ ಉದ್ದೇಶವಿತ್ತು. ಪ್ರಥಮವಾಗಿ ಆ ಘಟ್ಟದಲ್ಲಿ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಮತ್ತು ದ್ವಿತೀಯ ಉದ್ದೇಶ ಇದರ ಸಾಧನೆಗಾಗಿ ಅಗತ್ಯ ಕಂಡಂತಹ ತ್ಯಾಗ – ಬಲಿದಾನಕ್ಕೆ ಸಿದ್ಧವೆಂದು ತಿಳಿಸಿ ಜನತೆಯನ್ನು ಆ ಕಡೆ ಒಲಿಯುವಂತೆ ಮಾಡುವುದು.

ಸ್ವಾತಂತ್ರ್ಯ ಪತಾಕೆಯನ್ನು ಎತ್ತಿಕೊಂಡು ಊರೂರಿಗೆ ಹೋಗಿ ಜಾಗೃತಿಯನ್ನುಂಟುಮಾಡಿದ್ದ ಟಿ.ಸಿದ್ದಲಿಂಗಯ್ಯನವರು ಅಧಿವೇಶನದ ಅಧ್ಯಕ್ಷರಾದರು. ಅಧಿವೇಶನವು ಧ್ವಜಸತ್ಯಾಗ್ರಹದ ಚಿಲುಮೆಯಿಂದಲೂ ರೋಮಾಂಚನವಾದ ಘಟನೆಯಿಂದಲೂ ಪ್ರಕಾಶಿಸಿತು. ಬೆಳಗ್ಗೆ ಧ್ವಜಾರೋಹಣದಿಂದ ಅಧಿವೇಶನದ ಕಾರ್ಯ ಕಲಾಪಗಳು ಆರಂಭವಾಗುವುದು ವಾಡಿಕೆ. ಆದರೆ ಮೈಸೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ ಬಹಿರಂಗವಾಗಿ ರಾಷ್ಟ್ರಧ್ವಜವನ್ನು ಹಾರಿಸಕೂಡದೆಂದು ನಿಷೇಧಿಸಿದರು. ನಿಯೋಜಿತ ಕಾರ್ಯ ನಿಲ್ಲುವಂತಿರಲಿಲ್ಲ. ಆಜ್ಞೆಯ ಉಲ್ಲಂಘನೆ ಅನಿವಾರ್ಯವಾಯಿತು. ಮೊದಲನೆಯ ದಿನ ಧ್ವಜಾರೋಹಣಕ್ಕೆ ಪ್ರಯತ್ನಿಸಿದಾಗ ಸ್ಥಳದಲ್ಲೇ ಟಿ.ಸಿದ್ದಲಿಂಗಯ್ಯ ಮತ್ತು ಎಂ.ಎನ್.ಜೋಯಿಸ್ ದಸ್ತಗಿರಿಯಾದರು. ಎರಡನೆಯ ದಿನ ಅದೇ ಸ್ಥಳದಲ್ಲಿ ಕೆ.ಸಿ.ರೆಡ್ಡಿ , ವಿ.ವೆಂಕಟಪ್ಪ, ಎಚ್.ಸಿ.ದಾಸಪ್ಪರನ್ನು ಬಂಧಿಸಿದರು. ಮೂರನೆಯ ದಿನ ಬಳ್ಳಾರಿ ಸಿದ್ದಮ್ಮ ದಸ್ತಗಿರಿಯಾದರು. ಈ ಚಳವಳಿಯು ಸಂಸ್ಥಾನದಾದ್ಯಂತ ಹರಡಿತು!

ಟಿ.ಸಿದ್ದಲಿಂಗಯ್ಯನವರಿಗೆ ೨ ತಿಂಗಳ ಕಾಲ, ಎಚ್.ಸಿ.ದಾಸಪ್ಪ, ಕೆ.ಟಿ. ಭಾಷ್ಯಂ, ಎಚ್.ಸಿದ್ಧಯ್ಯನವರಿಗೆ ೪ ತಿಂಗಳು ೨೦ ದಿನ, ವಿ. ವೆಂಕಟಪ್ಪ ಮತ್ತು ಕೆ.ಸಿ.ರೆಡ್ಡಿಯವರಿಗೆ ೩ ತಿಂಗಳು ೨೦ ದಿನ, ಸಿದ್ದಮ್ಮನವರಿಗೆ ೨೫ ದಿನ ಮಂಡ್ಯ ನ್ಯಾಯಾಲಯವು ಸಾದಾ ಶಿಕ್ಷೆಯನ್ನು ವಿಧಿಸಿತು.

ನಂತರ ಎಚ್.ಬಿ.ಗುಂಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿ ಹೋಗಿ ಅಲ್ಲಿ ಧ್ವಜಾರೋಹಣ ಮಾಡುವಂತೆ ಕಾರ್ಯಕರ್ತರಿಗೆ ಕರೆ ನೀಡಲಾಯಿತು.



ಶಿವಪುರದಿಂದ ಹಿಂತಿರುಗಿದ ಕಾರ್ಯಕರ್ತರು ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ವಿದುರಾಶ್ವತ್ಥದಲ್ಲಿ ಧ್ವಜಾರೋಹಣ ಮಾಡುವುದೆಂದು ನಿರ್ಧರಿಸಿಕೊಂಡರು. ಏಪ್ರಿಲ್ ತಿಂಗಳಲ್ಲಿ ಜಾತ್ರೆ ನಡೆಯುವುದರಿಂದ ಚಳುವಳಿಗೆ ಹೆಚ್ಚು ಪ್ರಚಾರ ಆಗುತ್ತದೆ ಎಂಬ ಉದ್ದೇಶದಿಂದ ಈ ತೀರ್ಮಾನವನ್ನು ಕೈಗೊಂಡರು. ಇದನ್ನು ಮುಂದಾಗಿ ತಿಳಿದುಕೊಂಡ ಜಿಲ್ಲಾ ಮ್ಯಾಜಿಸ್ಟ್ರೇಟ್ ಜಿ. ಅಪ್ಪಾಜಿಗೌಡರು ಜಿಲ್ಲೆಯಾದ್ಯಂತ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದ್ದರು. ಧ್ವಜ ಸತ್ಯಾಗ್ರಹದ ತೀರ್ಮಾನವನ್ನು ಮುಖಂಡರು ಜನರ ಮುಂದೆ ಇಟ್ಟಾಗ ಜನ ವಿದುರಾಶ್ವತ್ಥದಲ್ಲಿ ಸೇರಲಾರಂಭಿಸಿದರು. ಸತ್ಯಾಗ್ರಹಿಗಳ ಜೊತೆಗೆ ಯಾತ್ರಾರ್ಥಿಗಳೂ ಚಳವಳಿಯಲ್ಲಿ ಭಾಗವಹಿಸಲು ಸಿದ್ಧರಾದರು. ಜಿಲ್ಲೆಯ ಮುಖಂಡರಾದ ಟಿ.ರಾಮಾಚಾರ್‌ರವರ ನೇತೃತ್ವದಲ್ಲಿ ದೇವಸ್ಥಾನದ ಹಿಂಭಾಗದಲ್ಲಿ ನಿರ್ಮಿಸಿದ್ದ ಸಭಾ ವೇದಿಕೆಗೆ ಧ್ವಜಾರೋಹಣ ಮಾಡಲು ಹೊರಟರು. ಅಲ್ಲಿಗೆ ಬಂದ ಸತ್ಯಾಗ್ರಹಿಗಳನ್ನು ಮುಖಂಡರನ್ನೂ ಪೊಲೀಸರು ಬಂಧಿಸಿದರು. ಇದನ್ನು ನೋಡಿದ ಜನಜಂಗುಳಿ ವೀರಾವೇಶದಿಂದ ಜಯಕಾರ ಮಾಡಿದರು. ಪೊಲೀಸು ಅಧಿಕಾರಿಗಳು ರಾಮಾಚಾರ್ ರವರನ್ನು ಅಲ್ಲಿಂದ ನಿರ್ಗಮಿಸಲು ಹೇಳಿ ತಾವೂ ಅಲ್ಲಿಂದ ಹೊರಡುವುದಾಗಿ ಹೇಳಿದರು. ಒಂದು ಕಡೆ ತಮ್ಮ ಉದ್ದೇಶ ನೆರವೇರಿತೆಂದು ಸತ್ಯಾಗ್ರಹಿಗಳು ಹೊರಡುತ್ತಿದ್ದರೆ ಇನ್ನೊಂದು ಕಡೆ ಬೇರೆಯ ತಂಡ ಸಭಾವೇದಿಕೆಯನ್ನು ಹತ್ತಿ ಧ್ವಜಾರೋಹಣ ಮಾಡಲು ಪ್ರಯತ್ನಿಸಿತು. ಲಾಠಿ ಪ್ರಹಾರಕ್ಕೆ ಮಣಿಯದ ಸತ್ಯಾಗ್ರಹಿಗಳ ಉತ್ಸಾಹವನ್ನು ನೋಡಿದ ಪೊಲೀಸ್ ಅಧಿಕಾರಿಗಳು ಗೋಲೀಬಾರ್‌ಗೆ ಆಜ್ಞೆ ಮಾಡಿದರು. ಜನರ ಹಾಹಾಕಾರ ಹೆಚ್ಚಿತು. ನಿರಪರಾಧಿ ಜನರನ್ನು ಇಕ್ಕಟ್ಟಿನ ಸ್ಥಳಕ್ಕೆ ಸೇರಿಸಿಕೊಂಡು ಗುಂಡು ಹಾರಿಸಿ ಕೊಂದರು. ಆ ದಿನ ೯೬ ಸುತ್ತು ಗುಂಡು ಹಾರಿಸಿದರೆಂದು ವೇ.ಪಾ.ರಮೇಶಂ ರವರು ವರದಿಯಲ್ಲಿ ಹೇಳಿದ್ದಾರೆ. ಆದರೆ ಸರ್ಕಾರಿ ದಾಖಲೆಗಳಲ್ಲಿ ಸತ್ತವರ ಸಂಖ್ಯೆ ೯ ಎಂದು ದಾಖಲಾಗಿದೆ.

ಈ ದುರಂತವನ್ನು ಎರಡನೆಯ ಜಲಿಯನ್ ವಾಲಾಬಾಗ್ ಎಂದು ವರ್ಣಿಸಲಾಗಿದೆ. ಅತ್ಯಂತ ಹೃದಯ ವಿದ್ರಾವಕ ದುರಂತವನ್ನು ಪ್ರತಿಭಟಿಸಿ ಪಟ್ಟಾಭಿರಾಮನ್‌ರು ಜಿಲ್ಲಾ ಶಾಖಾ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ

ಕೊಟ್ಟರು. ಕೋಲಾರ ಜಿಲ್ಲೆಯಲ್ಲಿ ಧ್ವಜ ಸತ್ಯಾಗ್ರಹಕ್ಕೆ ಸಂಬಂಧಪಟ್ಟಂತೆ ಅನೇಕ ಸಭೆಗಳು ನಡೆದವು. ಅಂತಹ ಒಂದು ಬೃಹತ್ ಸಭೆಯಲ್ಲಿ ಪಟ್ಟಾಭಿರಾಮನ್ ಪ್ರತಿಬಂಧಕಾಜ್ಞೆಯ ಕಾರಣ ಬಂಧನಕ್ಕೆ ಒಳಗಾದರು. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಯಿತು.

ಈ ದುರಂತದಿಂದ ಗಾಂಧೀಜಿಯವರ ದೃಷ್ಟಿ ಮೈಸೂರಿನ ಮೇಲೆ ಬೀಳುವಂತಾಯಿತು. ಅದನ್ನು ಪರಿಶೀಲಿಸಲು ರಾಷ್ಟ್ರ ನಾಯಕರಾದ ವಲ್ಲಭಬಾಯ್ ಪಟೇಲ್, ಆಚಾರ್ಯ ಕೃಪಲಾನಿಯವರು ವಿದುರಾಶ್ವತ್ಥಕ್ಕೆ ಬಂದರು. ಪಟೇಲ್ ಮಿರ್ಜಾ ಒಪ್ಪಂದವಾಗಿದ್ದು, ಆಗಲೇ! ರಾಷ್ಟ್ರ ಧ್ವಜವನ್ನು ಮೈಸೂರು ಮಹಾರಾಜರ ಗಂಡಭೇರುಂಡ ಧ್ವಜದೊಂದಿಗೆ ಹಾರಿಸಬಹುದೆಂದು ಘೋಷಿಸಲಾಯಿತು. ಒಂದು ದೃಷ್ಟಿಯಲ್ಲಿ ಮೈಸೂರು ಚಳುವಳಿಯೂ ರಾಷ್ಟ್ರೀಯ ಚಳುವಳಿಯ ಒಂದು ಅಂಗವಾಯಿತು

## ಜಿಲ್ಲೆಯಲ್ಲಿ ಮತ್ತಷ್ಟು ಚಟುವಟಿಕೆಗಳು

ಪಿ. ರಾಮೇಗೌಡರು, ಮುಳಬಾಗಿಲು ತಾಲ್ಲೂಕಿನ ಪದಕಾಷ್ಠಿಯವರು, ೧೯೩೮ ರ ಶಿವಪುರದ ಸತ್ಯಾಗ್ರಹದ ನಂತರ ಬಂಧನದಿಂದ ಬಿಡುಗಡೆಯಾದರು. ಮುಳಬಾಗಿಲು ತಾಲ್ಲೂಕಿನ ಆವನಿ ಗ್ರಾಮಕ್ಕೆ ಬಂದಿದ್ದ ಎಚ್.ಸಿ.ದಾಸಪ್ಪ, ಹಾಗೂ ಯಶೋಧರಾ ದಾಸಪ್ಪ ಅವರ ಭಾಷಣಗಳಿಂದ ಪ್ರಭಾವಿತರಾದರು, ತಮ್ಮ ಗೆಳೆಯ ಪುಟ್ಟಣ್ಣನವರೊಂದಿಗೆ ಹಳ್ಳಿ ಹಳ್ಳಿಗೆ ಹೋಗಿ ಕಾಂಗ್ರೆಸ್‌ಗೆ ಸದಸ್ಯರನ್ನು ನೋಂದಣಿ ಮಾಡುವ ಕೆಲಸದಲ್ಲಿ ತೊಡಗಿದರು. ಕೆ.ಸಿ.ರೆಡ್ಡಿ, ಕೆ.ಪಟ್ಟಾಭಿರಾಮನ್, ಟಿ.ರಾಮಾಚಾರ್, ಎನ್.ಸಿ.ನಾಗಯ್ಯ ರೆಡ್ಡಿ, ಮುಂತಾದ ನಾಯಕರ ಭಾಷಣಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಏರ್ಪಡಿಸುವುದರ ಮೂಲಕ ಕಾಂಗ್ರೆಸ್ಸಿನ ಜನಪ್ರಿಯತೆಗೆ ಕಾರಣರಾದರು.

ಈ ಸಂದರ್ಭದಲ್ಲಿ ಕೋಲಾರದಲ್ಲಿ ಹುಟ್ಟಿ ಬೆಳೆದು ಕೋಲಾರ ಗಾಂಧಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಿಸ್ವಾರ್ಥ ಸ್ವಾತಂತ್ರ್ಯ ಹೋರಾಟಗಾರ ಕೆ.ಪಟ್ಟಾಭಿರಾಮನ್‌ರನ್ನು ಪರಿಚಯ ಮಾಡಿಕೊಳ್ಳುವುದು ಔಚಿತ್ಯ ಪೂರ್ಣವಾಗಿದೆ.



ಕೆ.ಸಿ.ರೆಡ್ಡಿಯವರ ಸಮಕಾಲೀನರಾದ ಪಟ್ಟಾಭಿರಾಮನ್ ಹುಟ್ಟಿದ್ದು ಕೋಲಾರದಲ್ಲಿ ೧೯೦೧ ರಲ್ಲಿ. ಇವರ ತಂದೆ ಕೃಷ್ಣಪ್ಪ, ತಾಯಿ ಪಿಳ್ಳಮ್ಮ. ಪ್ರಾಥಮಿಕ ವಿದ್ಯಾಭ್ಯಾಸ ಕೋಲಾರದಲ್ಲಿ ನಡೆಯಿತು. ಪದವಿ ಶಿಕ್ಷಣಕ್ಕೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರವೇಶ ಪಡೆದರು. ಮದರಾಸಿನ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪೂರೈಸಿಕೊಂಡರು. ಕೆಲವು ಕಾಲ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಆದರೆ ನಂತರ ಅವರು ಅಪ್ಪಿಕೊಂಡಿದ್ದು ವಕೀಲಿ ವೃತ್ತಿಯನ್ನು. ಕೋಲಾರದಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದರು.

ವಿದ್ಯಾರ್ಥಿಯಾಗಿದ್ದಾಗಲೇ ಅನಿಬೆಸೆಂಟ್, ರಾಜಾರಾಮ ಮೋಹನ್ ರಾಯ್, ಅರವಿಂದ ಘೋಷ್‌ರ ಲೇಖನಗಳಿಂದ ಪ್ರಭಾವಿತರಾದರು, ಗಾಂಧೀಜಿಯವರ ತತ್ವಗಳನ್ನು ಅರ್ಥ ಮಾಡಿಕೊಳ್ಳುತ್ತಾ ಅನುಷ್ಠಾನಕ್ಕೆ ತಂದುಕೊಂಡರು.

೧೯೩೭ ರಲ್ಲಿ ಕಾಂಗ್ರೆಸ್ ಧುರೀಣ ಸೀತಾರಾಮಶಾಸ್ತ್ರಿ ಮತ್ತು ಟಿ.ಸಿದ್ಧಲಿಂಗಯ್ಯನವರ ಮುಖಂಡತ್ವದಲ್ಲಿ ಕೋಲಾರದಲ್ಲಿ ನಡೆದ ಕಾಂಗ್ರೆಸ್ ಸಭೆಯ ಮೂಲಕ ಸಕ್ರಿಯ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದರು.

ಅಪ್ಪಟ ಗಾಂಧಿವಾದಿ ಪಟ್ಟಾಭಿರಾಮನ್ ಖಾದಿ ವಸ್ತ್ರ ಧರಿಸುತ್ತಿದ್ದರು, ಸರಳ ಜೀವನ ನಡೆಸುತ್ತಿದ್ದರು, ಜಿಲ್ಲೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದರು. ಅಲ್ಲಿಂದ ಮುಂದೆ ಸ್ವಾತಂತ್ರ್ಯ ಗಳಿಸಿಕೊಳ್ಳುವವರೆವಿಗೆ, ಅನಂತರವೂ ಅವರು ಅರ್ಥಪೂರ್ಣವಾದ ಹೋರಾಟವನ್ನು ಮಾಡಿದರು. ಅದನ್ನು ಆಯಾ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲಾಗುವುದು.

ಏಪ್ರಿಲ್ ೧೧, ೧೯೩೯ ರಂದು ವಿದುರಾಶ್ವತ್ಥದಲ್ಲಿ ಎರಡನೆಯ ಕಾಂಗ್ರೆಸ್ ಸಮಾವೇಶ ಏರ್ಪಾಟಾಗಿತ್ತು. ಅದರ ಪೂರಕ ವ್ಯವಸ್ಥೆಯ ಜವಾಬ್ದಾರಿಯನ್ನೆಲ್ಲ ಬಂಗಾರಪೇಟೆಯ ಎಂ.ದೊರಸ್ವಾಮಿಯವರು ವಹಿಸಿಕೊಂಡಿದ್ದರು. ಸುಮಾರು ೩೦೦೦ ಸ್ವಯಂಸೇವಕರು ಭಾಗವಹಿಸಿದ್ದ ಈ ಸಮಾವೇಶಕ್ಕೆ ವಾಣಿಯಂಬಾಡಿಯಿಂದ ರೈಲಿನಲ್ಲಿ ಚಪ್ಪರದ ಚಾಪೆಗಳನ್ನು ತರಿಸಿಕೊಳ್ಳಲಾಗಿತ್ತು. ಹತ್ತು ಎತ್ತಿನ ಗಾಡಿಗಳ ಸಹಾಯದಿಂದ ಎತ್ತರದ ಧ್ವಜ ಸ್ತಂಭವನ್ನು ತಂದಿದ್ದು

ಸಾಹಸದ ಕೆಲಸವಾಯಿತು. ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಎಚ್.ಸಿ.ದಾಸಪ್ಪ ಅಲಂಕೃತ ಕುದುರೆಯ ಮೇಲೆ ಮೆರವಣಿಗೆಯಲ್ಲಿ ಸಭಾ ಮಂಟಪಕ್ಕೆ ಆಗಮಿಸಿದರು. ಅಧಿವೇಶನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

ಈ ಯಶಸ್ಸು ಇನ್ನಿತರ ಪ್ರತಿಭಟನೆಗಳಿಗೆ ಪ್ರೇರಣೆಯಾಯಿತೆಂದರೆ ತಪ್ಪಾಗಲಾರದು. ಮೈಸೂರಿನ ಟೌನ್‌ಹಾಲ್ ಕಟ್ಟಡಕ್ಕೆ, ಕ್ರೂರಿ ಆಡಳಿತಗಾರ ಹ್ಯಾಮಿಲ್ಟನ್ ಹೆಸರನ್ನು ಇಡುವ ಪ್ರಯತ್ನಕ್ಕೆ ಸರಕಾರ ಮುಂದಾಯಿತು. ಇದನ್ನು ವಿರೋಧಿಸಲು ಕಾಂಗ್ರೆಸ್ ಪಕ್ಷ ಸತ್ಯಾಗ್ರಹಕ್ಕೆ ಕರೆ ನೀಡಲಾಗಿತ್ತು. ಆಗ ವಿವಿಧ ಭಾಗಗಳಿಂದ ಸತ್ಯಾಗ್ರಹಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು. ಕೋಲಾರದಿಂದಲೂ ಅನೇಕರು ಭಾಗವಹಿಸಿದ್ದರು.

## ಕೋಲಾರ ಚಿನ್ನದ ಗಣಿ ಸತ್ಯಾಗ್ರಹ

೧೯೩೬ ರಲ್ಲಿ ಗಾಂಧೀಜಿಯವರು ಚಿನ್ನದ ಗಣಿ ಪ್ರದೇಶಕ್ಕೆ ಬಂದು ಹೋದ ನಂತರ ಸ್ಥಳೀಯರಿಗೆ ಸ್ವಾತಂತ್ರ್ಯದ ಚಳವಳಿಯ ಬಗ್ಗೆ ಜಾಗೃತಿ ಉಂಟಾಗಬೇಕಾಗಿತ್ತು. ಆದರೆ ಅಲ್ಲಿ ಇದ್ದುದು ಬ್ರಿಟಿಷರ ಆಡಳಿತದ ವರ್ಗ ಮತ್ತು ಅವರ ಕೈ ಕೆಳಗೆ ದುಡಿಯುತ್ತಿದ್ದ ಕಾರ್ಮಿಕರ ವರ್ಗ. ಯಾವುದೇ ಸ್ಥಳೀಯರ ಪ್ರತಿಭಟನೆ ಗಮನಕ್ಕೆ ಬಂದರೆ ಬ್ರಿಟಿಷರು ಅವರನ್ನು ಹತ್ತಿಕ್ಕುತ್ತಾ ಇತರರಿಗೆ ಭಯವನ್ನು ಹುಟ್ಟಿಸುತ್ತಿದ್ದರು. ಆದ್ದರಿಂದ ತಮ್ಮ ದುಡಿತ, ಜನಜೀವನದ ಸಮಸ್ಯೆಗಳಲ್ಲಿ ಮುಳುಗಿದ್ದ ಕಾರ್ಮಿಕರು ಈ ಚಳವಳಿಯ ಬಗ್ಗೆ ಆಳವಾಗಿ ಯೋಚಿಸುವ ಅವಕಾಶಗಳು ಇಲ್ಲವಾಗಿತ್ತು.

ಗಣಿ ಪ್ರದೇಶದಲ್ಲಿ ಸುಮಾರು ೨೧,೦೦೦ ಕಾರ್ಮಿಕರು ದುಡಿಯುತ್ತಿದ್ದರು. ಬ್ರಿಟಿಷ್ ಕಾಯ್ದೆ ೧೭ ಅಲ್ಲಿ ಜಾರಿಯಲ್ಲಿತ್ತು. ಈ ಕಾಯ್ದೆಯ ಪ್ರಕಾರ ಯಾರನ್ನು ಬೇಕಾದರೂ ೨೪ ಗಂಟೆಯೊಳಗೆ ಗಡಿಪಾರು ಮಾಡುವ ಅಧಿಕಾರ ಸ್ಥಳೀಯ ಆಡಳಿತಕ್ಕೆ ಇತ್ತು. ಬ್ರಿಟನ್ನಿನ ಜಾನ್ ಟೇಲರ್ ಕಂಪನಿಯ ಒಡೆತನದಲ್ಲಿದ್ದ ಈ ಗಣಿ ಪ್ರದೇಶದಲ್ಲಿ ೮೦ ಸಾವಿರ ಜನ ವಾಸಿಸುತ್ತಿದ್ದರು. ಕಾರ್ಮಿಕರಾಗಲಿ, ಅವರ ಕುಟುಂಬಗಳಾಗಲಿ ಅವರು ವಾಸ ಮಾಡುತ್ತಿದ್ದ ಸ್ಥಳದಲ್ಲಾಗಲಿ ಯಾವ ರೀತಿಯ ಕನಿಷ್ಠ ಸೌಲಭ್ಯಗಳನ್ನೂ ಕೊಟ್ಟಿರಲಿಲ್ಲ. ೧೦ ಸಾವಿರ ಅಡಿ ಆಳದ



ಗಣಿಯಲ್ಲಿ ಇಳಿದು ದುಡಿಯುತ್ತಿದ್ದ ಕಾರ್ಮಿಕನಿಗೆ ದಿನಗೂಲಿ ಕೇವಲ ಆರು ಆಣೆ ಮಾತ್ರ. ಕೆಲಸ ಮಾಡುವಾಗ ಒಂದು ವೇಳೆ ಸತ್ತು ಹೋದರೂ ಯಾವ ಪರಿಹಾರವೂ ಇರಲಿಲ್ಲ. ಕೊಟ್ಟಷ್ಟೆ ಸಂಬಳ, ಇಟ್ಟುಕೊಂಡಷ್ಟು ದಿನ ಕೆಲಸ. ಯಾವಾಗ ಬೇಕೆಂದರೆ ಆಗ ಕೆಲಸದಿಂದ ತೆಗೆದು ಬಿಡಬಹುದಾಗಿತ್ತು, ಭದ್ರತೆ ಇರಲಿಲ್ಲ.

ಆ ಸಮಯದಲ್ಲಿ ಕೋಲಾರ ಜಿಲ್ಲೆಯಲ್ಲಿ ಮೈಸೂರು ಕಾಂಗ್ರೆಸ್‌ನ ರಾಜಕೀಯ ಚಟುವಟಿಕೆಗಳು ತೀವ್ರಗೊಂಡವು. ಚಿನ್ನದ ಗಣಿ ಪ್ರದೇಶದಲ್ಲೂ ಬಿರುಸಿನಿಂದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದರು.

ಆ ಸಂದರ್ಭದಲ್ಲಿ ೧೯೩೯ ಆಗಸ್ಟ್ ನಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಎಚ್.ಸಿ.ದಾಸಪ್ಪನವರು ಜೊತೆಯಲ್ಲಿ ಚಿನ್ನದ ಗಣಿ ಪ್ರದೇಶಕ್ಕೆ ಅನೇಕ ಮುಖಂಡರುಗಳ ಜೊತೆಯಲ್ಲಿ ಚಿನ್ನದ ಗಣಿ ಪ್ರದೇಶಕ್ಕೆ ಬಂದರು. ಆದರೆ ಆಗ ಗಣಿ ಪ್ರದೇಶಕ್ಕೆ ಕಾಂಗ್ರೆಸ್ ಸಮಿತಿಯ ಸದಸ್ಯರು ಹೋಗಬಾರದೆಂದು ನಿರ್ಬಂಧ ಮಾಡಿದ್ದರು. ಅದನ್ನು ವಿರೋಧಿಸಿ ಪಟ್ಟಾಭಿರಾಮನ್, ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ ಮುಂತಾದ ನಾಯಕರು ಸೇರಿ ಅಲ್ಲಿ ಸಾರ್ವಜನಿಕ ಬಹಿರಂಗ ಸಭೆಯನ್ನು ನಡೆಸಲು ಏರ್ಪಾಟು ಮಾಡಿದರು.

ಜಿಲ್ಲಾಧಿಕಾರಿ ಸುಂದರರಾವ್ ಅವರ ನೇತೃತ್ವದಲ್ಲಿದ್ದ ಪೊಲೀಸರು ಗಣಿ ಪ್ರದೇಶಕ್ಕೆ ಇವರ ಪ್ರವೇಶವನ್ನು ತಡೆದರು. ಅದು ಮೈನಿಂಗ್ ಏರಿಯಾ ಆದ್ದರಿಂದ ಅಲ್ಲಿ ಬಹಿರಂಗ ಸಭೆ ನಡೆಸುವುದು ಸರಿಯಲ್ಲ ಅಂದರು. ಆದರೆ ಕಾರ್ಯಕರ್ತರೆಲ್ಲ ಸಮೀಪದ ಆಲದ ಮರದ ಕೆಳಗೆ (ಈಗಲೂ ಆ ಮರ ಇದೆ) ಸಭೆ ನಡೆಸಿ ತಡೆಯಾಜ್ಞೆಯನ್ನು ಉಲ್ಲಂಘಿಸಿ ಸಭೆ ನಡೆಸಿದ್ದರಿಂದ ಎಲ್ಲರನ್ನೂ ದಸ್ತಗಿರಿ ಮಾಡಿ ಕೋಲಾರ ಚಿನ್ನದ ಗಣಿ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದರು. ಪಟ್ಟಾಭಿರಾಮನ್, ಕೆ.ಸಿ.ರೆಡ್ಡಿ, ಸಂಪಂಗಿರಾಮಯ್ಯ, ಕೆ.ಟಿ. ಭಾಷ್ಯಂ, ಎಚ್.ಸಿ. ದಾಸಪ್ಪ, ಎಸ್.ರಂಗರಾಮಯ್ಯ, ಎಂ.ಗೋವಿಂದರೆಡ್ಡಿ, ಕೆ.ಹಂಜೇರಪ್ಪ, ಎಂ.ಮಹಾಬಲರಾವ್ ಹಾಗೂ ಟಿ.ಸುಬ್ರಹ್ಮಣ್ಯಂಗೆ ೩ ತಿಂಗಳ ಕಾಲ ಕಠಿಣ ಸಜೆ ವಿಧಿಸಿದರು. ಮೂರು ತಿಂಗಳಲ್ಲಿ ಸ್ವಲ್ಪ ದಿನ ಕೋಲಾರ ಚಿನ್ನದ ಗಣಿ ಜೈಲು ಬೆಂಗಳೂರು ಸೆಂಟ್ರಲ್ ಜೈಲು ನಂತರ ಮೈಸೂರು ಜೈಲಿನಲ್ಲಿಟ್ಟಿದ್ದರು.

ಸೆರೆಮನೆಯಲ್ಲಿದ್ದಾಗ ಇಷ್ಟು ರಾಗಿ ಬೀಸಬೇಕು, ವಾರಕ್ಕೆ ಇಷ್ಟು ನಡೆಯಲೇಬೇಕು ಎಂಬ ನಿರ್ಬಂಧಗಳನ್ನು ಹೇರಲಾಗುತ್ತಿತ್ತು. ಈಗಾಗಲೇ ವಕೀಲಿ ವೃತ್ತಿ ನಡೆಸುತ್ತಿದ್ದ ಟಿ.ರಾಮಾಚಾರ್, ಸಂಪಂಗಿ ರಾಮಯ್ಯ, ಪಟ್ಟಾಭಿರಾಮನ್ ರವರಿಗೆ ರಾಜ್ಯ ಉಚ್ಚ ನ್ಯಾಯಾಲಯ ನೀಡಿದ್ದ ವಕೀಲ ವೃತ್ತಿಯ ಸನ್ನದನ್ನು ಅಮಾನತುಗೊಳಿಸಿತು.

**ಸತ್ಯಾಗ್ರಹ ಶಿಬಿರ**

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ ಪ್ರವೇಶದ ನಿರ್ಬಂಧ ಹಾಗೂ ಬಂಧನಗಳನ್ನು ವಿರೋಧಿಸಿ ಕಾರ್ಯಕರ್ತರು ಸತ್ಯಾಗ್ರಹವನ್ನು ನಡೆಸುತ್ತಿದ್ದರು. ಈ ಸತ್ಯಾಗ್ರಹಿಗಳಿಗೆ ತರಬೇತಿ ನೀಡಲು ಬಂಗಾರಪೇಟೆಯಲ್ಲಿ ಪಕ್ಷದ ವತಿಯಿಂದ ಸತ್ಯಾಗ್ರಹ ಶಿಬಿರವನ್ನು ತೆರೆಯಲಾಯಿತು. ಎಂ.ಆರ್.ದೊರೆಸ್ವಾಮಿಯವರು ಶಿಬಿರದ ಮುಖ್ಯಸ್ಥರು, ಶಿಬಿರಕ್ಕೆ ಬೇರೆ ಬೇರೆಯ ಕಡೆಯಿಂದ ಬರುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಊಟ, ವಸತಿ ಹಾಗೂ ರೈಲು ಟಿಕೆಟ್‌ಗಳಿಗೆ ಬೇಕಾದ ಆರ್ಥಿಕ ನೆರವನ್ನು ಜಿಲ್ಲೆಯ ಎ.ಟಿ.ಲಕ್ಷ್ಮಣ ಮೊದಲಿಯಾರ್ ಹಾಗೂ ರಾಜಾ ಆದಿನಾರಾಯಣ ಶೆಟ್ಟಿಯವರು ಉದಾರವಾಗಿ ನೀಡುತ್ತಿದ್ದರು. ಬೆಳ್ಳಿ ಲೋಟದಲ್ಲಿ ಗಾಂಧೀಯವರಿಗೆ ಗಂಗಾಜಲವನ್ನು ಕೊಟ್ಟಿದ್ದ ದೇಶಭಕ್ತ ಆದಿನಾರಾಯಣ ಶೆಟ್ಟರ ಪ್ರಸ್ತಾಪ ಈಗಾಗಲೇ ಬಂದಿದೆ.

ಶಿಬಿರದ ಅದ್ಭುತವಾದ ಯೋಜನೆಯನ್ನು ಮಾಡಲಾಗಿತ್ತು. ಪ್ರತಿ ದಿನ ೧೦ ಜನರಂತೆ ಸತ್ಯಾಗ್ರಹಿಗಳನ್ನು ಮಾರುವೇಷದಲ್ಲಿ ಗಣಿ ಪ್ರದೇಶದೊಳಗೆ ನುಸುಳಿಸಿ ಸತ್ಯಾಗ್ರಹವನ್ನು ನಡೆಸಲು ರಹಸ್ಯವಾಗಿ ಕಾರ್ಯಯೋಜನೆ ರೂಪಗೊಳ್ಳುತ್ತಿತ್ತು. ಅದರಂತೆ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿತ್ತಂತೆ. ದೊರೆಸ್ವಾಮಿಯವರಿಗೆ ಸಹಾಯ ಮಾಡಲು ಜಿ.ಎಸ್.ಚಿಕ್ಕವೀರಪ್ಪ, ಎಂ.ರಾಮಕೃಷ್ಣಯ್ಯ, ಆರ್.ಎಚ್.ರಾಮಕೃಷ್ಣಪ್ಪ, ಟಿ.ಜಿ.ಚಿಕ್ಕಸಿದ್ದಪ್ಪ, ಮುಂತಾದವರು ಟೊಂಕ ಕಟ್ಟಿ ನಿಂತಿದ್ದರು. ಗಣಿ ಪ್ರದೇಶದ ಸುತ್ತಮುತ್ತಲು ಊರಿಂದ ಊರಿಗೆ ಹೋಗಿ ಸತ್ಯಾಗ್ರಹ ನಡೆಸಲು ಇಲ್ಲಿನ ತರಬೇತಿ ಪರಿಣಾಮಕಾರಿಯಾಗಿತ್ತು.



ಪ್ರತಿ ದಿನ ೫೦೦ ರಿಂದ ೮೦೦ ಸತ್ಯಾಗ್ರಹಿಗಳಿಗೆ ಊಟೋಪಚಾರ ವ್ಯವಸ್ಥೆ ಏರ್ಪಾಟಾಗುತ್ತಿತ್ತು. ಬಂಗಾರಪೇಟೆಯ ಸತ್ಯಾಗ್ರಹ ಶಿಬಿರಕ್ಕೆ ಸಂಬಂಧಿಸಿದಂತೆ ಮಂಡ್ಯದಲ್ಲೂ ಶಿಬಿರದ ವ್ಯವಸ್ಥೆ ಮಾಡಲಾಗಿತ್ತು. ಈ ಸತ್ಯಾಗ್ರಹದಲ್ಲಿ ಮೊದಲ ದಿನ ಭಾಗವಹಿಸಿದ ೨೧ ಮಂದಿ ಕಾರ್ಯಕರ್ತರು ರೈತರ ವೇಷದಲ್ಲಿ ಮಾರಿಕುಪ್ಪಂ ರೈಲನ್ನೇರಿದರು. ಬೋಗಿಯಲ್ಲಿ ಖಾದಿ ವಸ್ತ್ರ, ಟೋಪಿಯನ್ನು ಧರಿಸಿ, ಕಿಟಕಿಯಿಂದ ಹೊರಕ್ಕೆ ಬಾವುಟವನ್ನು ಚಾಚಿ, ಜಯಘೋಷವನ್ನು ಮಾಡುವುದರ ಮೂಲಕ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು.

ಆದರೆ, ಪೊಲೀಸರು ರಾಬರ್ಟ್‌ಸನ್ ಪೇಟೆಯಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸಿದರು. ಅಲ್ಲಿಂದ ಅವರನ್ನೆಲ್ಲ ಮದನಪಲ್ಲಿ ರಸ್ತೆಗೆ ಕರೆದುಕೊಂಡು ಹೋಗಿ ಕಾಡಿನಲ್ಲಿ ಕತ್ತಲಲ್ಲಿ ಮೈಲಿಗೊಬ್ಬರಂತೆ ವ್ಯಾನಿನಿಂದ ಹೊರಕ್ಕೆ ದೂಡುತ್ತಿದ್ದರಂತೆ. ಕಾರ್ಗತ್ತಲಲ್ಲಿ ರಾತ್ರಿಯೆಲ್ಲಾ ಕಳೆದು ಬೆಳಗಾದ ಮೇಲೆ ಎಲ್ಲರೂ ಒಂದು ಕಡೆ ಸೇರಿ, ಸಮೀಪದ ಗ್ರಾಮಸ್ಥರ ಸಹಾಯವನ್ನು ಪಡೆದು, ಬಂಗಾರಪೇಟೆಗೆ ಹಿಂತಿರುಗುತ್ತಿದ್ದರು. ಮತ್ತೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಉತ್ಸುಕರಾಗುತ್ತಿದ್ದರು.

ಈ ರೀತಿ ಸತ್ಯಾಗ್ರಹ ನಿರಂತರವಾಗಿ ನಡೆಯಿತು. ಪ್ರತಿ ದಿನ ಸತ್ಯಾಗ್ರಹಿಗಳ ಬಂಧನ – ಗಡಿಪಾರು ನಡೆಯುತ್ತಿತ್ತು. ಸೆಪ್ಟಂಬರ್ ೨೭, ೧೯೩೮ ರಂದು ಬಂಗಾರಪೇಟೆ ಶಿಬಿರದ ಮುಖಂಡರಾಗಿದ್ದ ದೊರೆಸ್ವಾಮಿ ಮತ್ತು ಎಂ.ರಾಮಕೃಷ್ಣಯ್ಯ, ಸಿದ್ದವೀರಪ್ಪ, ಆದಿನಾರಾಯಣ ಶೆಟ್ಟಿ, ಸಿದ್ದಪ್ಪ, ಸರ್ವಜ್ಞಮೂರ್ತಿ ಹಾಗೂ ಇನ್ನಿತರರ ಬಂಧನವಾಯಿತು. ದೊರೆಸ್ವಾಮಿಯವರಿಗೆ ಒಂದೂವರೆ ವರ್ಷಗಳ ಕಾಲ ಕಠಿಣ ಜೈಲು ಶಿಕ್ಷೆ ಹಾಗೂ ೨೦೦ ರೂ. ದಂಡ ವಿಧಿಸಿ ಮಂಡ್ಯ ಜೈಲಿಗೆ ಕಳಿಸಿದರು.

ಎಂ.ರಾಮಕೃಷ್ಣಯ್ಯ ಮತ್ತು ಇತರ ಕಾರ್ಯಕರ್ತರಿಗೆ ೩ ತಿಂಗಳ ಸೆರೆಮನೆ ವಾಸವನ್ನು ವಿಧಿಸಿ ಕೆ.ಜಿ.ಎಫ್. ನ ಸೆರೆಮನೆಯಲ್ಲಿಟ್ಟರು. ೨ ತಿಂಗಳ ಕಠಿಣ ಸಜೆಯಾದುದು ಚಿಕ್ಕ ವೀರಪ್ಪನವರಿಗೆ. ಕೆ.ವೆಂಕಟಕೃಷ್ಣಪ್ಪನವರಿಗೆ ಈ ಸತ್ಯಾಗ್ರಹದಲ್ಲಿ ಭಾಗವಹಿಸಿದುದಕ್ಕೆ ಮೊದಲನೆಯ ಸಲ ಗಡಿಪಾರು. ಎರಡನೆಯ

ಸಲ ಒಂದು ವಾರದ ಕಠಿಣ ಶಿಕ್ಷೆ, ಮೂರನೆಯ ಸಲ ೫ ವಾರ ಕಠಿಣ ಶಿಕ್ಷೆ ಆಯಿತು. ಅವರಿಗೆ ದಂಡವನ್ನು ಹಾಕಲಾಯಿತು. ಆದರೆ ಆ ದಂಡದ ಮೊತ್ತವನ್ನು ಸಂಗ್ರಹಿಸಲು ಆಸ್ತಿಯ ಜಪ್ತಿ ಆಯಿತು. ಎರಡು ಎಮ್ಮೆ ಹಾಗೂ ಕರುವನ್ನು ಹರಾಜು ಹಾಕಿದರಂತೆ, ಸಿ.ಬಿ.ಪುರದ ಕೆ.ವೆಂಕಟರಾಯಪ್ಪನವರನ್ನು ಬೆಂಗಳೂರು ಜೈಲಿಗೆ ಕಳಿಸಿದರು. ಜೊತೆಗೆ ಜುಲ್ಮಾನೆಯನ್ನು ಸಂಗ್ರಹಿಸಲು ಆಸ್ತಿಯ ಜಪ್ತಿ ಮಾಡಿ ಅವಮಾನ ಮಾಡಿದ್ದು ಅತ್ಯಂತ ದುಃಖದ ಸಂಗತಿಯಾಯಿತು. ಇದೇ ತಾಲ್ಲೂಕಿನ ಜಿ.ವಿ.ವೆಂಕಟಸ್ವಾಮಿಯವರು, ಟಿ. ರುದ್ರಪ್ಪ, ಮುನಿನಾಗಪ್ಪ, ಶಿವರುದ್ರಪ್ಪ ಮುಂತಾದ ೨೦ ಸಂಗಡಿಗರೊಂದಿಗೆ ಬಂಗಾರಪೇಟೆಯ ಶಿಬಿರಕ್ಕೆ ಹೋದರು. ಅಲ್ಲಿಂದ ಇವರ ನಾಯಕತ್ವದಲ್ಲಿ ತೆರಳಿದ ಸತ್ಯಾಗ್ರಹಿಗಳ ತಂಡ ಬೇತಮಂಗಲವನ್ನು ಸೇರಿತು. ಅಲ್ಲಿನ ಸ್ಥಳೀಯರ ಸಹಕಾರ ಪ್ರೋತ್ಸಾಹದಿಂದ ಸತ್ಯಾಗ್ರಹವನ್ನು ನಡೆಸಿತು. ಅಲ್ಲಿ ದಸ್ತಗಿರಿಯಾದ ತಂಡವನ್ನು ಚಿತ್ತೂರು ಕಾಡಿಗೆ ಗಡಿಪಾರು ಮಾಡಿದರು. ಅಲ್ಲಿಂದ ಹೇಗೋ ಶ್ರೀನಿವಾಸಪುರವನ್ನು ತಲುಪಿದ ಸತ್ಯಾಗ್ರಹಿಗಳು ಪುನಃ ಕೆ.ಜಿ.ಎಫ್. ಗೆ ಹಿಂತಿರುಗಿ ಮತ್ತೊಮ್ಮೆ ಸತ್ಯಾಗ್ರಹದಲ್ಲಿ ಭಾಗವಹಿಸಿ ೭ ದಿನಗಳ ಕಾಲ ಸಾದಾ ಶಿಕ್ಷೆಗೆ ಒಳಪಟ್ಟರು.

ಹೀಗೆ ನಿರಂತರವಾಗಿ ಸತ್ಯಾಗ್ರಹಿಗಳು ಕೆ.ಜಿ.ಎಫ್.ನಲ್ಲಿ ತಮ್ಮ ಅಸಹಕಾರವನ್ನು ವ್ಯಕ್ತಪಡಿಸುತ್ತಿದ್ದುದು ಉಲ್ಲೇಖಾರ್ಹ.

### ಕ್ವಿಟ್ ಇಂಡಿಯಾ ಚಳುವಳಿ

ಸಮಸ್ತ ಭಾರತೀಯರು ಕಂಕಣ ಬದ್ಧರಾಗಿ ಅಹಿಂಸಾ ಮಾರ್ಗದಲ್ಲಿ ನಡೆದು, ಬ್ರಿಟಿಷರಿಗೆ ಭಾರತವನ್ನು ಬಿಟ್ಟು ತೊಲಗಿ ಎಂದು ಒತ್ತಾಯವನ್ನು ಹೇರಿದ್ದೂ ಆಗಸ್ಟ್ ೮, ೧೯೪೨ ರಂದು. ಗಾಂಧೀಜಿಯವರು 'ಮಾಡು ಇಲ್ಲವೇ ಮಡಿ' ಎಂಬ ಮಂತ್ರವನ್ನು ದೇಶೀಯರಿಗೆ ನೀಡಿದರು. ಈ ಕಾರಣದಿಂದ ಆಗಸ್ಟ್ ೯ ರಂದು ಅಸಂಖ್ಯಾತ ಕಾಂಗ್ರೆಸ್ ನೇತಾರರನ್ನು ಎಲ್ಲೆಂದರೆ ಅಲ್ಲಿ ಬಂಧಿಸಿ ಸೆರೆಮನೆಗೆ ದೂಡಲಾಯಿತು. ಸ್ವತಃ ಗಾಂಧೀಜಿಯವರೇ ಬಂಧನಕ್ಕೊಳಗಾದರು. ಇದನ್ನು ಪ್ರತಿಭಟಿಸಿ ದೇಶಾದ್ಯಂತ ಸತ್ಯಾಗ್ರಹ, ನಿರಶನ, ಮುಷ್ಕರ, ಪ್ರತಿಭಟನಾ ಮೆರವಣಿಗೆಗಳು ನಡೆದವು. ಸತ್ಯಾಗ್ರಹಿಗಳನ್ನು ತುಂಬಲು ಜೈಲುಗಳಲ್ಲಿ ಸ್ಥಳ ಸಾಕಾಗಲಿಲ್ಲ. ಆದರೂ ಸತ್ಯಾಗ್ರಹಿಗಳು ಉತ್ಸಾಹ, ಹುಮ್ಮಸ್ಸು, ತಗ್ಗಲಿಲ್ಲ. ಸತ್ಯಾಗ್ರಹದ ಕಾವೂ ಕಡಿಮೆಯಾಗಲಿಲ್ಲ. ಇದರ ಬಿಸಿ ಸಂಸ್ಥಾನಕ್ಕೂ ತಗುಲಿತು. ಅದೇ ದಿನ ಕಾಂಗ್ರೆಸ್ ಸಂಘಟನೆಗಳನ್ನು ಕಾನೂನು ಬಾಹಿರವೆಂದು ಘೋಷಿಸಿ ಅವುಗಳನ್ನು ಅಸಿಂಧುಗೊಳಿಸುವ ಆದೇಶ ಸಂಸ್ಥಾನದ ಸರ್ಕಾರದಿಂದ ಹೊರಟಿತು.



ಗಾಂಧೀಜಿಯವರ ಬಂಧನವನ್ನು ವಿರೋಧಿಸಿ ಚಿಂತಾಮಣಿ ಹಾಗೂ ಬಾಗೇಪಲ್ಲಿಯಲ್ಲಿ ಪ್ರಭಾತ್ ಫೇರಿ, ಬಹಿರಂಗ ಸಭೆಯು ನಡೆಯಿತು. ಕೋಲಾರ ಬೆಂಗಳೂರು ರೈಲು ಮಾರ್ಗವನ್ನು ಹಾನಿ ಮಾಡಲಾಯಿತು. ರೈಲು ಹಳಿ, ತಾರು ತಂತಿ ನಾಶ ಮಾಡಿದರೆಂದು ಲಕ್ಷ್ಮಣರಾಯರನ್ನು ಚಿಂತಾಮಣಿಯಲ್ಲಿ ಬಂಧಿಸಿದರು.

ಗಾಂಧೀಜಿಯವರ ಬಂಧನವನ್ನು ಪ್ರತಿಭಟಿಸಿ ಜಿಲ್ಲೆಯಾದ್ಯಂತ ಬಹಿರಂಗ ಸಭೆಗಳು ನಡೆದವು. ಶಾಲಾ ಕಾಲೇಜುಗಳು ಮುಚ್ಚಿದವು. ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಯಿತು.

ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿ ಮುಂಬಯಿಯಿಂದ ವಾಪಸು ಬರುತ್ತಿದ್ದ ಕೆ.ಸಿ.ರೆಡ್ಡಿಯವರನ್ನು ಬೆಂಗಳೂರಿನ ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಬಂಧಿಸಲಾಯಿತು. ೧೯೪೨ ಆಗಸ್ಟ್ ೧೦ ರಂದು ಬಂಧನಕ್ಕೊಳಗಾದ ರೆಡ್ಡಿಯುವರನ್ನು ದೀರ್ಘಕಾಲ ಬೆಂಗಳೂರಿನ ಕಾರಾಗೃಹದಲ್ಲಿಡಲಾಗಿತ್ತು.

ಕೋಲಾರದ ಕಠಾರಿಪಾಳ್ಯದ ವೇಣುಗೋಪಾಲಸ್ವಾಮಿ ದೇವಾಲಯದ ಹತ್ತಿರ ರಾತ್ರಿ ಸಭೆಯನ್ನು ನಡೆಸಿದರು. ಅದೇ ಸಮಯದಲ್ಲಿ ಪಟ್ಟಾಭಿರಾಮನ್, ಸಂಪಂಗಿರಾಮಯ್ಯ, ರಾಮಾಚಾರ್, ವೈ.ಆರ್. ಗಂಗಿರೆಡ್ಡಿ, ಬಿ.ಎಲ್. ನಾರಾಯಣಸ್ವಾಮಿ, ಸರ್ವಜ್ಞಮೂರ್ತಿ, ಎಂ.ದೊರೆಸ್ವಾಮಿ ಮುಂತಾದವರನ್ನು ದಸ್ತಗಿರಿ ಮಾಡಲಾಯಿತು. ೧೯೪೨ ನೆಯ ಇಸವಿ ಆಗಸ್ಟ್ ತಿಂಗಳಿಂದ ೧೯೪೩ ನೆಯ ಇಸವಿ ಡಿಸೆಂಬರ್ ತಿಂಗಳವರೆವಿಗೆ ಅಂದರೆ ೧೬ ತಿಂಗಳ ಕಾಲ, ಪಟ್ಟಾಭಿರಾಮನ್ ಜೈಲು ವಾಸ ಮಾಡಬೇಕಾಯಿತು. ಅವಿಶ್ರಾಂತವಾಗಿ ಚಳವಳಿಯಲ್ಲಿ ದುಡಿದ ಪಟ್ಟಾಭಿರಾಮನ್ ಬೆಂಗಳೂರು, ಹಾಸನ ಹಾಗೂ ಶಿವಮೊಗ್ಗ ಸೆರೆಮನೆಗಳಲ್ಲಿಯೇ ಹೆಚ್ಚು ಸಮಯವನ್ನು ಕಳೆಯಬೇಕಾಯಿತು.

ಕೋಲಾರದಲ್ಲಿ ದಸ್ತಗಿರಿಯಾದ ಇನ್ನು ಹಲವಾರು ಮುಖಂಡರನ್ನು ಬೆಂಗಳೂರು–ಶಿವಮೊಗ್ಗ ಜೈಲುಗಳಿಗೆ ಅಲೆದಾಡಿಸಲಾಯಿತು. ಉಳಿದ ಕಾರ್ಯಕರ್ತರು ರೈಲು ಹಳಿಗಳನ್ನು ಹಾನಿ ಮಾಡಿದರು. ತೊಂಡೆಬಾವಿ – ಗೌರಿಬಿದನೂರು ರೈಲ್ವೆ ಹಳಿ ಹಾಳಾದುದರಿಂದ ಆಗಸ್ಟ್ – ಸೆಪ್ಟಂಬರ್ ೧೯೪೨ ರಲ್ಲಿ ರಾತ್ರಿ ಹೊತ್ತು ಸಂಚರಿಸುತ್ತಿದ್ದ ಪ್ಯಾಸೆಂಜರ್ ರೈಲುಗಳು ರದ್ದಾದವು.

ವಿದ್ಯಾರ್ಥಿಗಳ ಚಳವಳಿ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಭೂಗತ ಚಳುವಳಿಗೆ ತೊಡಗಿದ ಚಿಕ್ಕಬಳ್ಳಾಪುರ ಕೆ.ವೆಂಕಟರಾಮಪ್ಪನವರು ರೈಲ್ವೆ ಹಳಿ ಹಾನಿ, ಅಂಚೆ ಕಚೇರಿ ಲೂಟಿ, ತಾರು ತಂತಿ ಕಡಿತ ಮುಂತಾದ ವಿಧ್ವಂಸಕ ಕೃತ್ಯಗಳಲ್ಲಿ ಬ್ರಿಟಿಷರ ವಿರುದ್ಧ ಎದ್ದು ನಿಂತಿದ್ದರಿಂದ ದಸ್ತಗಿರಿ ಮಾಡಿ ೧೩ ತಿಂಗಳ ಕಾಲ ಜೈಲು ವಾಸ ಅನುಭವಿಸಿದರು.

ಬಂಗಾರಪೇಟೆಯ ಜಿ.ಎಸ್.ಚಿಕ್ಕವೀರಪ್ಪನವರನ್ನು ಬಂಧಿಸಲಾಯಿತು. ಇವರನ್ನು ಬೆಂಗಳೂರಿನ ಕಾರಾಗೃಹದಲ್ಲಿಟ್ಟಿದ್ದರು. ಕೆಲವು ಕಾಲದ ನಂತರ ಕೋಲಾರದ ಉಪ–ಕಾರಾಗೃಹದಲ್ಲಿದ್ದರು. ಬಿ.ಜಿ.ಚಿಕ್ಕಸಿದ್ದಪ್ಪ ಬಂಗಾರಪೇಟೆಯಲ್ಲಿ ಪ್ರಭಾತ ಪೇರಿ, ಪಿಕೆಟಿಂಗ್ ಹಾಗೂ ಬಹಿರಂಗ ಸಭೆಗಳನ್ನು ಏರ್ಪಡಿಸುತ್ತಿದ್ದರು. ಇದನ್ನು ಕಂಡ ಪೊಲೀಸರು ಅವರನ್ನು ಬಂಧಿಸಿ ಬೆಂಗಳೂರು ಜೈಲಿಗೆ ವರ್ಗಾಯಿಸಿದರು. ೩ ತಿಂಗಳ ನಂತರ ಬಿಡುಗಡೆ ಮಾಡಿದರು. ಜಿ.ವಿ.ವೆಂಕಟಸ್ವಾಮಿಯವರ ಜವಳಿ ಅಂಗಡಿಯ ಪರವಾನಗಿಯನ್ನು ಸರ್ಕಾರ ರದ್ದು ಮಾಡಿತು. ಮುಳಬಾಗಿಲು ರಾಮೇಗೌಡರು ಕೆ.ಜಿ.ಎಫ್ ಜೈಲು, ಕೋಲಾರದ ಉಪ–ಕಾರಾಗೃಹಗಳಲ್ಲಿ ಇದ್ದರು. ನಂತರ ಬೆಂಗಳೂರು ಅಲ್ಲಿಂದ ಶ್ರೀರಂಗಪಟ್ಟಣದ ಜೈಲುಗಳಿಗೆ ವರ್ಗಾಯಿಸಿದರು.

ಹೆಚ್ಚು ದಿನ ಒಂದೇ ಜೈಲಿನಲ್ಲಿದ್ದರೆ ಅಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಒಗ್ಗಟ್ಟಾಗಿ ಹೋರಾಟ ಮಾಡುತ್ತಾರೆಂಬ ಗುಮಾನಿಯಿಂದ ಹೀಗೆ ಬಂಧಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸುತ್ತಿದ್ದರು.

ಕೆ.ಜಿ.ಎಫ್‌ನ ಪಿ.ಪುಷ್ಪಂ ಬೆಂಗಳೂರಿನಲ್ಲಿ ಗುಟ್ಟಾಗಿ ಮುದ್ರಣಗೊಳ್ಳುತ್ತಿದ್ದ ಸ್ವಾತಂತ್ರ್ಯ ಸಮಾಜದ ಸಂದೇಶವನ್ನು ಸಾರುವ ಕರಪತ್ರಗಳನ್ನು ಭೂಗತವಾಗಿ



ವಿತರಣೆ ಮಾಡುತ್ತಿದ್ದರು. ಇದರ ಸುಳಿವು ಕಂಡುಕೊಂಡ ಸರಕಾರ ಅವರನ್ನು ಬಂಧಿಸಿ ಬೆಂಗಳೂರಿನ ಜೈಲಿನಲ್ಲಿ ಇಟ್ಟರು. ಶಿಡ್ಲಘಟ್ಟ ತಾಲ್ಲೂಕಿನ ದೇಶಭಕ್ತರ ಹಳ್ಳಿಯ ಬಿ. ವೆಂಕಟರಾಮಪ್ಪನವರು ೨೦ ದಿನ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದ್ದು ಇದೇ ಸಂದರ್ಭದಲ್ಲಿಯೇ.

ಕೋಲಾರದ ಟೌನ್ ಹಾಲ್‌ನಲ್ಲಿ ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತು ಪ್ರಭಾತ ಫೇರಿಯನ್ನು ನಡೆಸುತ್ತಿದ್ದರು. ಭಾಷಣಗಳು ಏರ್ಪಾಟಾಗುತ್ತಿದ್ದವು. ಜಿಲ್ಲೆಯ ಶಾಲೆಗಳನ್ನು ೨–೩ ವಾರ ಮುಚ್ಚಲಾಗಿತ್ತು. ವಿದ್ಯಾರ್ಥಿಗಳೆಲ್ಲ ಪ್ರಭಾತ ಫೇರಿ ಹಾಗೂ ಭಾಷಣಗಳಲ್ಲಿ ಭಾಗವಹಿಸಿ, ಸ್ವಾತಂತ್ರ್ಯದ ಕಿಚ್ಚನ್ನು ಪ್ರದರ್ಶನ ಮಾಡುತ್ತಿದ್ದರು.

೧೯೪೩ ರ ಜನವರಿ ೨೪ ರಂದು ಕೆ.ಸಿ.ರೆಡ್ಡಿಯವರಿಗೆ ಸೆರೆಮನೆ ಶಿಕ್ಷೆ ಮುಗಿದು ಬಿಡುಗಡೆಯಾದರು. ಬಂಗಾರಪೇಟೆ ಆದಿನಾರಾಯಣ ಶೆಟ್ಟರ ತೋಟದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ೧೯೪೪ ರಲ್ಲಿ ಏರ್ಪಡಿಸಲಾಗಿತ್ತು. ೧೯೪೬ ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಮೈಸೂರು ಕಾಂಗ್ರೆಸ್‌ನ ೬ನೆಯ ಅಧಿವೇಶನಕ್ಕೆ ಕೆ.ಸಿ.ರೆಡ್ಡಿಯವರು ಅಧ್ಯಕ್ಷರಾಗಿದ್ದರು.

## ಸರ್ವತಂತ್ರ ಸ್ವತಂತ್ರ ಭಾರತ

ಕೆಲಕಾಲದ ನಂತರ ಯುದ್ಧ ಭೀತಿಯಿಂದ ತತ್ತರಿಸಿದ ಬ್ರಿಟಿಷ್ ಸರ್ಕಾರ ಸಂಧಾನ ಮಾರ್ಗ ಹಿಡಿಯಿತು. ಬರಬರುತ್ತಾ ರಾಜಕೀಯ ತಿಳಿಗೊಂಡಿತು. ದೇಶಭಕ್ತರ ತ್ಯಾಗ, ಬಲಿದಾನ, ಹೋರಾಟದ ಫಲವಾಗಿ ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಸರ್ವತಂತ್ರ ಸ್ವತಂತ್ರವಾದ ಭಾರತದಲ್ಲಿ ಅಂದು ಯೂನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಿ ಭಾರತದ ಧ್ವಜವನ್ನು ಏರಿಸಲಾಯಿತು.

ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಸಮಾರಂಭವನ್ನು ಮೋತಕಪಲ್ಲಿಯಲ್ಲಿ ಪಟ್ಟಾಭಿರಾಮನ್‌ರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಯಿತು.

## ಜವಾಬ್ದಾರಿ ಸರ್ಕಾರ–ಮೈಸೂರು ಚಲೋ ಚಳುವಳಿ

ಮಳೆ ನಿಂತರೂ ಮಳೆ ಹನಿಗಳು ನಿಲ್ಲಲಿಲ್ಲ ಎಂಬಂತೆ ಭಾರತಕ್ಕೆ ಸ್ವಾತಂತ್ರ್ಯ ಬಂತು–ಆದರೆ ಮೈಸೂರು ಸಂಸ್ಥಾನಕ್ಕೆ ಸ್ವಾತಂತ್ರ್ಯ ಬರಲಿಲ್ಲ. ಸಂಸ್ಥಾನ ಇನ್ನು ಮೈಸೂರು ಅರಸರ ಅಧೀನದಲ್ಲೇ ಇತ್ತು. ಸಂಸ್ಥಾನದ ಕನ್ನಡಿಗರು ರಾಜಪ್ರಭುತ್ವದ ವಿರುದ್ಧ ಮತ್ತೊಂದು ಹೋರಾಟವನ್ನು ನಡೆಸಬೇಕಾಯಿತು. ಇದೇ ಜವಾಬ್ದಾರಿ ಸರ್ಕಾರ ರಚನೆಗೆ ನಡೆಸಿದ ಮೈಸೂರು ಚಲೋ ಚಳುವಳಿ ಅಥವಾ ಅರಮನೆ ಸತ್ಯಾಗ್ರಹ!

ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯ ರೂಪದಲ್ಲಿ ಜವಾಬ್ದಾರಿ ಸರ್ಕಾರದ ಬೀಜವನ್ನು ಬಿತ್ತಿದವರು ದಿವಾನ್ ರಂಗಾಚಾರ್ಲು ೧೮೮೧ ರಲ್ಲಿ. ೧೮೦೦ ರಿಂದಲೂ ಮೈಸೂರು ಸಂಸ್ಥಾನದ ಒಳ ಆಡಳಿತದಲ್ಲಿ ಪ್ರಜೆಗಳಿಗೆ ಅವಕಾಶವಿರಲಿಲ್ಲ. ೧೮೦೭ ರಲ್ಲಿ ಮೊದಲ ಬಾರಿಗೆ ನ್ಯಾಯ ವಿಧಾಯಕ ಸಭೆ ರಚಿತವಾದುದು. ಅದಕ್ಕೆ ಶಾಸನ ರಚನೆಯ ಅಧಿಕಾರವಿತ್ತು. ಅದು ದಿವಾನರು, ಸಚಿವರು ಹಾಗೂ ಸರ್ಕಾರದಿಂದ ನೇಮಕಗೊಂಡ ೧೫ ಮಂದಿ ಸದಸ್ಯರಿಂದ ಕೂಡಿತ್ತು. ಪ್ರಜಾಪ್ರತಿನಿಧಿ ಸಭೆ ೧೮೮೧ ರಲ್ಲಿ ಸ್ಥಾಪಿತವಾದ ಮೇಲೆ ೫೦ ರೂಪಾಯಿಗಳಿಂದ ೫೦೦ ರೂಪಾಯಿಗಳ ವಾರ್ಷಿಕ ಕಂದಾಯ ಸಲ್ಲಿಸುವವರು ಆ ಸಭೆಯ ನಾಮ ನಿರ್ದೇಶನಗೊಳ್ಳಬಹುದಾಗಿತ್ತು. ಸದಸ್ಯರ ನಾಮ ನಿರ್ದೇಶನಕ್ಕೆ ಬದಲಾಗಿ ಅವರು ಜನರಿಂದ ಚುನಾಯಿತರಾಗಬೇಕೆಂಬ ಒತ್ತಾಯ ೧೮೯೮ರಲ್ಲಿ ರಂಗದಾಸಪ್ಪನವರಿಂದ ಬಂದಿತು. ೧೯೦೦ರಲ್ಲಿ ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅದನ್ನು ಒಪ್ಪಿದರು. ಆಗಿನ ಪ್ರಜಾಪ್ರತಿನಿಧಿ ಸಭೆ ಕೇವಲ ಸಮಾಲೋಚಕ ಸಭೆಯಾಗಿತ್ತೇ ಹೊರತು ಆಡಳಿತದ ಮೇಲೆ ಅದಕ್ಕೆ ನಿಯಂತ್ರಣ ಮಾಡುವ ಅಧಿಕಾರವಿರಲಿಲ್ಲ. ಶಾಸನ ರಚನೆಯ ಬಗ್ಗೆ ನಿರ್ಣಯ ಕೈಗೊಳ್ಳಲು ಸಹ ಅದಕ್ಕೆ ಅಧಿಕಾರವಿರಲಿಲ್ಲ. ದಿವಾನ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆ ಆಯವ್ಯಯ ಪತ್ರದ ಮೇಲೆ ಚರ್ಚೆ ಮಾಡುವ ಜವಾಬ್ದಾರಿಯನ್ನು ೧೯೧೧ ರಲ್ಲಿ ನೀಡಲಾಯಿತು. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಶ್ನೆ ಕೇಳುವ ಅಧಿಕಾರ ಸದಸ್ಯರಿಗೆ ಇತ್ತು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂಬ ಕೂಗು ೧೯೧೯ ರ ಹೊತ್ತಿಗೆ ಹೆಚ್ಚಾಯಿತು. ೧೯೨೧ ರಲ್ಲಿ ದಿವಾನರು ಮತ್ತು



ಇತರ ಸಚಿವರಿಂದ ಕೂಡಿದ ಮಹಾರಾಜರಿಗೆ ಜವಾಬ್ದಾರಿಯಿಂದ ಪರಿಷತ್ತಿನ ರಚನೆಯಾಯಿತು. ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಸ್ಥಾನಮಾನಗಳು ಹೆಚ್ಚಿದವು. ಈ ವೇಳೆಗೆ ಕಾಂಗ್ರೆಸ್ ಹೂಡಿದ ಸ್ವಾತಂತ್ರ್ಯ ಹೋರಾಟ ಭಾರತದ ದೇಶೀಯ ಸಂಸ್ಥಾನಗಳಿಗೂ ವ್ಯಾಪಿಸಿತು. ೧೯೩೫ ರ ಭಾರತ ಸರ್ಕಾರದ ಅಧಿನಿಯಮದ ಪ್ರಕಾರ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ವಿಧಾನಸಭೆಗಳು ರಚಿತವಾದಾಗ, ದೇಶೀಯ ಸಂಸ್ಥಾನಗಳಲ್ಲೂ ಆ ಬಗೆಯ ಅಧಿಕಾರ ನೀಡಬೇಕೆಂಬ ಒತ್ತಡ ಹೆಚ್ಚಾಯಿತು. ೧೯೩೭ ರಲ್ಲಿ ಪಟ್ಟಾಭಿ ಸೀತಾರಾಮಯ್ಯ ಮತ್ತು ಬಲವಂತರಾಮ ಮೆಹತಾ ಇವರು ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಅಭಿಪ್ರಾಯ ಸಂಗ್ರಹಿಸಿ ಮೈಸೂರು ಸಂಸ್ಥಾನದಲ್ಲಿ ಜನಪ್ರಿಯ ಸರ್ಕಾರ ಸ್ಥಾಪಿತವಾಗಬೇಕೆಂದು ಅಭಿಪ್ರಾಯಪಟ್ಟರು.

ಪತ್ರಿಕೋದ್ಯಮ ಭೀಷ್ಮನಾದ ತಿ.ತಾ.ಶರ್ಮಾ ರವರು 'ಪೌರವಾಣಿ' ಪತ್ರಿಕೆಯನ್ನು ಪ್ರಾರಂಭ ಮಾಡಿದ್ದು ಈ ಸಂದರ್ಭದಲ್ಲೇ. ಕಾಂಗ್ರೆಸ್ ಅಭಿಪ್ರಾಯವನ್ನು, ಸಿದ್ಧಾಂತಗಳನ್ನು ಜನತೆಗೆ ತಲುಪಿಸಲು ವಾರಪತ್ರಿಕೆಯಾಗಿ ಪ್ರಾರಂಭಗೊಂಡು, ಕ್ರಮೇಣ ಜನಾನುರಾಗದಿಂದ ದಿನಪತ್ರಿಕೆಯಾಗಿ ಬೆಳೆದಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಮೈಸೂರು ಚಲೋ ಚಳುವಳಿ ಇತರ ಕಡೆಗಳಂತೆ ಕೋಲಾರದಲ್ಲಿ ಉಗ್ರರೂಪವನ್ನು ಪಡೆದುಕೊಂಡಿತು. ಆಗಸ್ಟ್ ೨೧, ೧೯೪೭ ರಂದು ಸಭೆ ಸೇರಿ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಮೈಸೂರು ಕಾಂಗ್ರೆಸ್ ಪಕ್ಷವು ಸತ್ಯಾಗ್ರಹವನ್ನು ಮಾಡಲು ತೀರ್ಮಾನ ಮಾಡಿದುದರ ಹಿಂದೆಯೇ ಜಿಲ್ಲೆಯ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಶಾಲಾ–ಕಾಲೇಜನ್ನು ತೊರೆದು ಬಂದು ಸಹಕಾರ ನೀಡಿದರು. ಈ ಚಳವಳಿಯ ಮುಖಂಡರಾಗಿದ್ದ ಪಟ್ಟಾಭಿರಾಮನ್, ಸಂಪತ್ ಕುಮಾರ್, ಕೆ.ಸಿ.ರೆಡ್ಡಿ, ಮೋತಕಪಲ್ಲಿಯ ಎಂ.ವಿ.ಕೃಷ್ಣಪ್ಪ, ಕೆ.ಹನುಮಂತಯ್ಯ, ಮುಂತಾದವರನ್ನು ಬಂಧಿಸಿದರು. ಬೆಂಗಳೂರಿನ ಸೆರೆಮನೆ, ಕೃಷ್ಣರಾಜಪುರದ ಹತ್ತಿರ ಆಗ ತಾನೇ ಹೊಸತಾಗಿ ಏರ್ಪಾಡಾಗಿದ್ದ ಡಿಟೆನ್‌ಷನ್ ಕ್ಯಾಂಪ್‌ನಲ್ಲಿ ಪಟ್ಟಾಭಿರಾಮನ್ ಅವರನ್ನು ಇರಿಸಿಕೊಂಡಿದ್ದು ನಂತರ ಬಿಡುಗಡೆ ಮಾಡಿದರು.

ಈ ಸಂಬಂಧ ಬಂಗಾರಪೇಟೆಯಲ್ಲಿ ಶಿಬಿರವನ್ನು ಏರ್ಪಡಿಸಲಾಗಿದ್ದು, ಇಲ್ಲಿಂದ ಮೈಸೂರಿಗೆ ಸತ್ಯಾಗ್ರಹಿಗಳನ್ನು ಕಳುಹಿಸಲಾಗುತ್ತಿತ್ತು. ೧೯೪೭ ಸೆಪ್ಟಂಬರ್ ೧೬ ರಂದು ಬಂಧನಕ್ಕೆ ಒಳಗಾದ ಬಂಗಾರಪೇಟೆಯ ಬಿ.ಜಿ.ಚಿಕ್ಕಸಿದ್ದಪ್ಪ ನವರು ಅಕ್ಟೋಬರ್ ೧೦ ರಂದು ಬಿಡುಗಡೆಯಾದರು. ಎನ್.ಸಿ.ನಾಗಯ್ಯರೆಡ್ಡಿ, ಯಲ್ದೂರು ನರಸಿಂಹಯ್ಯ ಸಹ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಮೋತಕಪಲ್ಲಿ ಎಂ.ವಿ.ಕೃಷ್ಣಪ್ಪನವರು ಭೂಗತ ಚಳವಳಿಯ ನೇತಾರರಲ್ಲಿ ಒಬ್ಬರು. ಕುಪ್ಪಂ ತಾಲ್ಲೂಕಿನ ರಾಜಪೇಟೆ ಭೂಗತ ಕೇಂದ್ರದ ಹೊಣೆ ಅವರದಾಗಿತ್ತು. ಜೊತೆಗೆ ಪಿಲ್ಲಗುಂಟ್ಲಹಳ್ಳಿಯ ಪಿ.ವಿ.ಸೀತಾರಾಮ ಶಾಂತಾ ನಂದಜಿಯವರು ಇದ್ದರು. ಕೆ.ಸಿ.ರೆಡ್ಡಿಯವರ ಸಂಬಂಧಿಗಳಾಗಿದ್ದ ರಾಜಪೇಟೆಯ ಪಿಲ್ಲ ರೆಡ್ಡಿ ಮತ್ತು ಕೃಷ್ಣಾಜಯರಾಮ ರೆಡ್ಡಿಯವರ ಸಹಕಾರ ಲಭಿಸಿತು. ಗುಟ್ಟಹಳ್ಳಿಯ ಶಿಬಿರಕ್ಕೆ ವಿವಿಧ ಭಾಗಗಳಿಂದ ಯುವಕರು ಬಂದಿದ್ದರು. ಈ ಶಿಬಿರಾರ್ಥಿಗಳು ಕ್ಯಾಸಂಬಳ್ಳಿಯ ಆಹಾರ ಉಗ್ರಾಣ ಕಟ್ಟಡಕ್ಕೆ ದಾಳಿ ಮಾಡಿ, ಆಹಾರ ಸಾಮಗ್ರಿಗಳನ್ನು ಲೂಟಿ ಮಾಡಿದರು. ಕ್ಯಾಸಂಬಳ್ಳಿ, ಬೇತಮಂಗಲ, ರಾಯಲ್ಪಾಡು ಹಾಗೂ ಕಾಮಸಂದ್ರ ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಿ ಆಹಾರ ವಶಪಡಿಸಿಕೊಂಡರು. ಇವರನ್ನು ಬಂಧಿಸಲು ಕೋಲಾರ ಚಿನ್ನದ ಗಣಿ ಪೊಲೀಸರು ಶಿಬಿರಕ್ಕೆ ಬಂದುಬಿಟ್ಟರು. ಆದರೆ ಈ ವಿಷಯವನ್ನು ಹೇಗೋ ತಿಳಿದುಕೊಂಡಿದ್ದ ಶಿಬಿರಾರ್ಥಿಗಳು ಪೊಲೀಸರ ದಾಳಿಗೆ ಮೊದಲೇ ಪಲಾಯನ ಮಾಡಿದ್ದರು.

ಹಿಂದೂಪುರದಲ್ಲಿದ್ದ ಸತ್ಯಾಗ್ರಹಿ ಶಿಬಿರವು ಕೋಲಾರ ಮತ್ತು ತುಮಕೂರು ರಸ್ತೆಯ ಚಟುವಟಿಕೆಗಳಿಗೆ ನೆಲೆಯಾಗಿತ್ತು.

ಮೈಸೂರು ಚಲೋ ಚಳವಳಿಯ ಅಧ್ಯಕ್ಷರನ್ನಾಗಿ ಕೆ.ಸಿ.ರೆಡ್ಡಿಯವರನ್ನು ನೇಮಿಸಲಾಯಿತು. ೧೯೪೭ ಸೆಪ್ಟಂಬರ್ ೧ ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ ಸಭೆಯಲ್ಲಿ ಸೇರಿದ್ದ ಲಕ್ಷಾಂತರ ಜನರನ್ನು ಉದ್ದೇಶಿಸಿ ಕೆ.ಸಿ.ರೆಡ್ಡಿಯವರು ಮಾತನಾಡಿದರು. ಆ ದಿನಗಳಲ್ಲಿ 'ಆರ್ಕಾಟ್ ಬಾಯ್ಕಾಟ್', 'ತಂಬು ಚೆಟ್ಟಿ, ಚಟ್ಟ ಕಟ್ಟಿ' ಮುಂತಾದ ಘೋಷಣೆಗಳು ಸರ್ವೇ ಸಾಮಾನ್ಯವಾಗಿ ಕೇಳಿ ಬರುತ್ತಿತ್ತು.



ಈ ಚಳುವಳಿಗೆ ಸಂಸ್ಥಾನದ ಉದ್ದಗಲಕ್ಕೂ ವಿದ್ಯಾರ್ಥಿಗಳು, ಕಾರ್ಮಿಕ ಸಂಘಗಳು, ಜನ ಸಾಮಾನ್ಯರು, ಬೆಂಬಲವಿತ್ತರು. ಎಲ್ಲ ಕಡೆಯಿಂದ ಕಾಂಗ್ರೆಸ್ ಕಾರ್ಯಕರ್ತರು ಪ್ರವಾಹದೋಪಾದಿಯಲ್ಲಿ ೧೯೪೭ ಸೆಪ್ಟಂಬರ್ ೧೪ ರಂದು ಮೈಸೂರಿಗೆ ಮುತ್ತಿಗೆ ಹಾಕಿದರು. ಈ ಚಳುವಳಿಯಲ್ಲಿ ಸಾವಿರಾರು ಜನರನ್ನು ದಸ್ತಗಿರಿ ಮಾಡಿದರು. ಆದರೆ ಜನರ ಹೋರಾಟಕ್ಕೆ ಅಂತಿಮವಾಗಿ ಮಣಿದ ಸಂಸ್ಥಾನದ ಸರ್ಕಾರ ಕಾಂಗ್ರೆಸ್‌ನೊಂದಿಗೆ ಸಂಧಾನ ಮಾಡಿಕೊಂಡಂತೆ ಬಂಧಿತರಾಗಿದ್ದ ಎಲ್ಲ ಕಾಂಗ್ರೆಸ್ಸಿನ ಕಾರ್ಯಕರ್ತರನ್ನು ೧೯೪೭ ಅಕ್ಟೋಬರ್ ೬ ರಂದು ಬಿಡುಗಡೆ ಮಾಡಿದರು.

೧೯೪೭ ಅಕ್ಟೋಬರ್ ೨೭ ರಂದು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕ್ಯಾಸಂಬಳ್ಳಿಯ ಚಂಗಲರಾಯರೆಡ್ಡಿ ಜನಪ್ರಿಯ ಕೆ.ಸಿ.ರೆಡ್ಡಿಯವರು ಸಂಸ್ಥಾನದ ಮೊದಲ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ೬ ಮಂದಿ ಕಾಂಗ್ರೆಸ್ಸಿಗರು ಹಾಗೂ ೩ ಮಂದಿ ಪಕ್ಷೇತರರನ್ನು ಒಳಗೊಂಡ ಮಂತ್ರಿ ಮಂಡಲವನ್ನು ರಚಿಸುವ ಮೂಲಕ ಜನಪ್ರಿಯ ಸರ್ಕಾರದ ರಚನೆಗೆ ನಾಂದಿ ಹಾಡಿದರು. ಇದರೊಂದಿಗೆ ಜನತೆಯ ಜವಾಬ್ದಾರಿ ಸರ್ಕಾರದ ಕನಸು ನನಸಾಯಿತು.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |